(ಶ್ರೀ ಎಂ. ನಾಗಪ್ಪ)

ಗಮನಕೊಟ್ಟು ಮುಖ್ಯವಾದ ಬೇರೆ ವಿಷಯಗಳನ್ನು ತೆಗೆದುಕೊಳ್ಳುವುದಕ್ಕೆ ಒಪ್ಪಲಿಲ್ಲ. ಬಡವರಿಗಾಗುತ್ತಿರುವ ನಷ್ಟ, ಅವರ ಕಷ್ಟ, ದೇಶಕ್ಕಾಗುತ್ತಿರುವ ಹಾನಿ ಸರಕಾರ ಗಮನಿಸಿ ಪ್ರಾಮುಖ್ಯವಾದ ಹಲವಾರು ಪ್ರಶ್ನೆಗಳು ನಮ್ಮ ಮುಂದಿರುವಾಗ, ಇಂದಿನ ಕಾರ್ಯಕ್ರಮಪಟ್ಟಿಯಲ್ಲಿ ಸೇರಿಸಿರುವಾಗ ಅಂಥ ಉತ್ತಮವಾದ ವಿಷಯಗಳನ್ನು ಬಿಟ್ಟು ಕೆಲಸಕ್ಕೆ ಬಾರದಿರುವ ವಿಷಯವನ್ನು ತೆಗೆದುಕೊಂಡು ಇಂದು ಚರ್ಚಿಸುವುದು ಬೇಡ, ಇದಕ್ಕೆ ಇಡೀ ಸಭೆಯನ್ನು, ಮಾನ್ಯ ಮಂತ್ರಿಗಳನ್ನು, ಆ ಕಡೆಯ ಮಿತ್ರರನ್ನು ಕೇಳಿಕೊಳ್ಳುತ್ತೇನೆ. ನಾನು ತಂದಿರುವ ನಿಲುವಳಿಯನ್ನು ಅಂಗೀಕರಿಸಿ ಈ ವಿಷಯವನ್ನು ಮುಂದಕ್ಕೆ ಹಾಕಬೇಕು ಎಂದು ಸಭಾಧ್ಯಕ್ಷರ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

**Mr. SPEAKER.**—Now this matter of postponement, has been discussed; every facet possible has been discussed; and there is absolutely nothing more to be discussed. I will simply put it to the vote of the House.
The question is :

> "That the consideration of the Mysore Ministers' Salaries and Allowances (Amendment) Bill, 1967 be adjourned."

*The motion was negatived.*

---

## MOTION TO ELICIT PUBLIC OPINION.

**Sri Mr. SPEAKER.**—There is another motion by Sri K. H. Ranganath. The question is :

> "That public opinion be elicited by 1-2-1968 on the Mysore Ministers' Salaries and Allowances (Amendment) Bill, 1967."

*The motion was negatived.*

**Sr. S. SIVAPPA.**—You did not give a ruling on the point I raised.

**Mr. SPEAKER.**—I will now give it. Sri Sivappa has asked for a ruling with regard to the No-Confidence Motion which, he says, he has given notice of. If he sees Rule 153, a notice has to be given not in the midst of the day when work is going on.

**Sri S. SIVAPPA.**—I have asked for suspension of the rule and invoked your special power.

**Mr. SPEAKER.**—I am not going to invoke any of the powers.

**Sri S. SIVAPPA.**—When are you going to take it up ?

**Mr. SPEAKER.**—Order, Order! The question is :

> "That the Mysore Ministers' Salaries and Allowances (Amendment) Bill, 1967, be taken into consideration."

Sri H. SIDDAVEERAPPA.—You have not allowed us to participate in this discussion. This is exactly what we do not like.....All of us will have to be bodily removed and will have to be thrown out. Do it. We cannot allow these things to go on. No. Are you prepared to fight with us ? You are unfair. You are very unfair.

Mr. SPEAKER.—Order, Order.

Sri H. SIDDAVEERAPPA.—You are trying to screen them and to side them. We are not going to allow—come what may. Sir, what are you going to do ?

(*Number of Members stood up, when the Speaker was on his legs.*)

Mr. SPEAKER.—Don't take down***

Sri AZEEZ SAIT.—Suppose a Member is on his legs.

Mr. SPEAKER.—I said, I have given $1\frac{3}{4}$ hours I will give time for amendments. I have no objection to allow another half-an-hour. More than half-an-hour I cannot allow.

ಶ್ರೀ ಎಚ್. ಸಿದ್ದವೀರಪ್ಪ.—ಸಾರ್ವಜನಿಕರ ಹಿತದೃಷ್ಟಿಯಿಂದ ಈ ಬಿಲ್ಲಿನ ಮೇಲೆ ಚರ್ಚೆ ಆಗಲೇಬೇಕು. ಇವತ್ತಲ್ಲದಿದ್ದರೆ ಇನ್ನೊಂದು ದಿವಸ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುತ್ತಾ ಇದ್ದೇನೆ. ತಾವು ಹೇಳುವಷ್ಟು ಸಮಯವನ್ನು ನಮಗೂ ಚೈಜೆರಿ ಬೆಂಚ್‌ನವರಿಗೂ ಹಂಚಿದರೆ ಸರಿಹೋಗುವುದಿಲ್ಲ, ನಮಗೆ ಹೆಚ್ಚು ಕಾಲಾವಕಾಶಬೇಕು.

Mr. SPEAKER.—Now, if I am to be told, this is what we have to do, that is one thing which I will not accept; that is number one; number two is, we must have fullest discussion and everybody wants to talk as long as he likes, is something which the House will not accept. The House has allowed $1\frac{3}{4}$ hours bulk of it has been spent. Though I may look very very liberal, I will give $1\frac{3}{4}$ hours. Beyond that I am not prepared to allow. A Member saying that this should be done and that should be done and the Speaker has no right to say is something which surprises me. I will know from the House what time should be allowed for general discussion and what shall be the time for amendment and what shall be the time for third reading.

Sri H. SIDDAVEERAPPA.—Sir, for general discussion we do require more time as I said the other day and giving it in writing to you that for general discussion.....

Sri D. M. SIDDAIAH.—We want another hour *i.e.*, up to 7 O' clock.

Mr. SPEAKER.—Is that the sense of the House ?

HON'BLE MEMBERS.—Yes.

Sri H. SIDDAVEERAPPA.—Sir, without asking us, you put it to the House. I have suggested it the other day and give it in writing. When the meeting of the Business Advisory Committee was held, for unavoidable reasons I was not present. I have requested you that in view of its public importance and public interest for this Bill you must have at least two clear days and not less than two clear days. That is my request and it will have to be considered.

*** Matter not recorded as ordered by the Chair.

†ಶ್ರೀ ಎಲ್. ಶ್ರೀಕಂಠಯ್ಯ.—ತಮಗೆ ನಾನು ಈ ಮೊದಲೇ ನೋಟೀಸ್ ಕೊಟ್ಟು ನನ್ನ ತಿದ್ದುಪಡಿಯನ್ನು ನೂಚನೆ ಮಾಡಿದ್ದೇನೆ, ಅದು ಪ್ರಿಂಟ್ ಆಗಿ ನಮ್ಮ ಕೈಗೆ ಸಹಿತ ಬಂದಿದೆ. ಅದನ್ನು ತಾವು ಪರಿಶೀಲನೆಗೆ ತೆಗೆದುಕೊಳ್ಳದೇ ನಿಂತುಕೊಂಡು ಓಟಿಗೆ ಹಾಕುತ್ತೀನೆ ಎಂದು ಹೇಳುವುದಾದರೆ ನಮ್ಮ ಹಕ್ಕುಬಾಧ್ಯತೆಗಳಿಗೆ ಚ್ಯುತಿ ಬರುತ್ತದೆ ಎಂದು ವಿಷಾದದಿಂದ ಹೇಳ ಬೇಕಾಗಿದೆ. ನಾನು ಹೆಚ್ಚು ಮಾತನಾಡುವುದಿಲ್ಲ. ತಮ್ಮ ಬಗ್ಗೆ ನಮಗೆ ಗೌರವ ಇದೆ, ತಾವು ಸ್ಪೀಕರ್ ಆಗಿ ಈ ತರಹ ರೂಲ್ಸ್ ಉಲ್ಲಂಘನೆ ಮಾಡಿ ನಮಗೆ ಅವಕಾಶ ಕೊಡದಿದ್ದರೆ ನಮ್ಮ ಮನಸ್ಸಿಗೆ ಬಹಳ ನೋವಾಗುತ್ತದೆ. ನಾನೇ ಮೊದಲು ನೋಟೀಸ್ ಕೊಟ್ಟವನು, ಮೂವ್ ಮಾಡುತ್ತೇನೆ ಎಂದು ಹೇಳಿದಾಗ ಕನ್‌ಸಿಡರೇಷನ್ ಸ್ಟೇಜ್‌ನಲ್ಲಿ ಮೂವ್ ಮಾಡಿ ಎಂದು ಹೇಳಿದಿರಿ. ಆದರೆ ನನಗೆ ಅವಕಾಶ ಕೊಡಲಿಲ್ಲ, ಅದಕ್ಕೆ ಬೆಲೆ ಇಲ್ಲ ಎಂದು ಹೇಳಿದರೆ ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು.—ಒಂದು ತಿದ್ದುಪಡಿಯನ್ನು ಆಗಲೇ ಒಬ್ಬರು ಮಂಡಿಸಿದರು.

ಶ್ರೀ ಎಲ್. ಶ್ರೀಕಂಠಯ್ಯ.— ಆದರೆ ಫಸ್ಟ್ ಲಿಸ್ಟ್‌ನಲ್ಲಿ ನನ್ನ ಅಮೆಂಡ್‌ಮೆಂಟ್ ಬಂದಿದೆ ಅದೇ ಮೊದಲು ಪ್ರಿಂಟ್ ಆಗಿರುವುದು, ಅದಕ್ಕೆ ಅವಕಾಶ ಕೊಡದೇ ಇದ್ದಮೇಲೆ ಅದಕ್ಕೆ ಏನು ಬೆಲೆ ಇದ್ದಂತೆ ಆಯಿತು ? ರೂಲ್ಸನ್ನು ಉಲ್ಲಂಘನೆ ಮಾಡಿದಂತೆ ಆಗಲಿಲ್ಲವೇ ? ಇದು ಹೇಗೆ ಆಗುತ್ತದೆ ಎಂದರೆ ಬೇಲಯೇ ಎದ್ದು ಹೊಲ ಮೇದ ಹಾಗೆ ಆಗುತ್ತದೆ ; ನಾನು ತಮ್ಮ ವಿಷಯದಲ್ಲಿ ಯಾವ ವಿಧವಾದ ರಿಮಾರ್ಕನ್ನೂ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಇಲ್ಲಿ ನಡೆಯುತ್ತಾ ಇರುವ ನಡವಳಿಕೆಯನ್ನು ನೋಡಿದರೆ ಈ ಬಿಲ್ಲು ಇವತ್ತೇ ಪಾಸ್ ಆಗಬೇಕು ಎಂದು ಶ್ರೀಮಾನ್ ಕಂಠಿ ಯವರು ಕುಳಿತಿದ್ದಾರೆ, ರೂಲ್ಸ್ ಬೇಡ, ಕಾನೂನು ಬೇಡ ಏನೂ ಬೇಡ. ಇದನ್ನು ನೋಡಿದರೆ ಬಹಳ ವಿಷಾದವಾಗುತ್ತದೆ.

**Mr. SPEAKER.**—Now, the Hon'ble Member Sri Srikantiah refers to a motion which has been discussed by the House. What he refers to is that this Bill be Circulated to elicit public opinion. Motion was moved by Sri K. H. Ranganath. If the motion is there, it does not mean that every member that has given notice for that should be allowed to move it. He must be alert.

**Sri L. SRIKANTAIAH.**—Who gave the notice prior ? I have no objection for Sri Ranganath to move it but who gave it earlier ? It is the duty of the Speaker and the office to know. Therefore, it is presumed that I have given it and I must be given the first chance.

**Mr. SPEAKER.**—The Hon'ble Member puts it on the ground that he gave notice first. When the motion of Sri Ranganath was moved, he made a special request to the House and it was put to the House. He made his speech ; vote was taken. Now Sri Srikantaiah says, something is wrong. I am unable to say anything in the matter. He was not alert.

†ಶ್ರೀ ಎಸ್. ಶಿವಪ್ಪ.—ಈಗ 322ನೇ ರೂಲ್ ಇನ್‌ವೋಕ್ ಮಾಡುವುದಕ್ಕಾಗುವುದಿಲ್ಲ, ಇವತ್ತು ಅವಿಶ್ವಾಸನ ನಿರ್ಣಯ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳಿದಿರಿ, ಹಾಗಾದಮೇಲೆ ಈ ನಿರ್ಣಯವನ್ನು ತಾವು ಯಾವಾಗ ಚರ್ಚೆಗೆ ತೆಗೆದುಕೊಳ್ಳುತ್ತೀರಿ, ನಭೆಯ ಗಮನಕ್ಕೆ ತರುತ್ತೀರಿ, ಇದು ನಭೆಯಮುಂದೆ ಯಾವಾಗ ಬರುತ್ತದೆ ಎಂಬುದನ್ನು ತಾವು ದಯವಿಟ್ಟು ತಿಳಿಸಬೇಕು. ಮಂತ್ರಿಗಳ ಸಂಬಳ ಖಾಸ್ತಿಮಾಡಬೇಕೆಂಬ ಮನೂದೆ ಚರ್ಚೆ ಆಗುವುದಕ್ಕಿಂತ ಮುಂದೆ ಈ ಮಂತ್ರಿ ಮಂಡಲದ ಮೇಲೆ ಅವಿಶ್ವಾಸನ ನಿರ್ಣಯವನ್ನು ತಂದಿರತಕ್ಕ ಕಾಲದಲ್ಲಿ ಇದರ ಚರ್ಚೆಗೆ ಅವಕಾಶವನ್ನು ಕೊಟ್ಟು ಇದರಮೇಲೆ ಒಂದು ಶೇರ್ಪನ್ನು ತೆಗೆದುಕೊಂಡ ಮೇಲೆ ಅವರಿಗೆ ಹೆಚ್ಚುಸಂಬಳ ಕೊಡಬೇಕೇ ಬಿಡಬೇಕೇ ಎಂಬ ವಾದ ಬರುವುದು. ಮಂತ್ರಿಮಂಡಲದ ಅಸ್ತಿತ್ವವನ್ನೇ ಇವತ್ತು ಪ್ರಶ್ನೆಮಾಡಿ ಅವಿಶ್ವಾಸನ ನಿರ್ಣಯವನ್ನು ನಾವು ತಂದಿರುವಾಗ ಅವರಿಗೆ ಹೆಚ್ಚು ಸಂಬಳಸಾರಿಗೆ ಕೊಡಲು ಚರ್ಚೆ ಮಾಡತಕ್ಕ ವಿಷಯ ಹೇಗೆ ಬರುತ್ತದೆ ? ಆದ್ದರಿಂದ ದಯವಿಟ್ಟು ಇದಕ್ಕೆ ಆದ್ಯತೆಕೊಟ್ಟು 322ನೇ ರೂಲನ್ನು ಇನ್‌ವೋಕ್ ಮಾಡಬೇಕೆಂದು ಹೇಳುತ್ತೇನೆ. ಇವತ್ತಲ್ಲದೇ ಇದ್ದರೂಕೂಡ ಈ ಅಧಿ ವೇಶನ ಮುಗಿಯುವುದರೊಳಗೆ ಇದಕ್ಕೆ ಅವಕಾಶ ಕೊಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

†ಶ್ರೀ ಎಸ್. ಗೋಪಾಲಗೌಡ.—ನಾನು ಕನ್ನಡ ಶಬ್ದ ಉಪಯೋಗಿಸಿದ್ದು ತಪ್ಪಆಯಿತು, ತಮ ವಿರುದ್ಧ ಅವಿಶ್ವಾಸ ಎಂದು ಹೇಳಿದೆ. ಇಲ್ಲಿ ಇಂಗ್ಲೀಷ್‌ನಲ್ಲಿ 'ರಿಮೂವ್' ಎಂದು ಇಲ್ಲಿರುವುದನ್ನು ಸರಿಯಾಗಿ ಕನ್ನಡಕ್ಕೆ ತರ್ಜುಮೆ ಮಾಡಿದರೆ 'ಕಿತ್ತುಹಾಕುವುದು' ಎಂದು ಅರ್ಥವಾಗುತ್ತದೆ.

Mr SPEAKER.—Is it a point of order? If it is something other than a point of order, I am not allowing.

Sri S. GOPALA GOWDA.—I woule like to move with your permission a motion.

Mr. SPEAKER.—I said, I am not giving permission.

ಶ್ರೀ ಎಸ್. ಗೊಪಾಲಗೌಡ.—ಏಕೆ ಸ್ವಾಮಿ ?

ಅಧ್ಯಕ್ಷರು.—ಏಕೆ ಅಂತ ಕೇಳಿದರೆ ಏನು ಹೇಳಬೇಕು ?

ಶ್ರೀ ಎಸ್. ಗೋಪಾಲಗೌಡ.—ಅದಕ್ಕೆ ತಾವು ಪಿಡಾರ್ಯತೋರಿಸಿ ರೂಲನ್ನು ಸಸ್‌ಪೆಂಡ್ ಮಾಡಿ ತತ್‌ಕ್ಷಣ ತಮ್ಮನ್ನು ಕಿತ್ತುಹಾಕುವುದಕ್ಕೆ ಸಂಬಂಧವನ್ನು ಚರ್ಚೆಗೆ ಅವಕಾಶ ಕೊಡಬೇಕೆಂದು ಏನು ಹೇಳಿದ್ದೇನೆ ಅದಕ್ಕೆ ಅವಕಾಶ ಕೊಡಬೇಕೆಂದು ಹೇಳುತ್ತೇನೆ. ನಾನು ನಿಮ್ಮಮೇಲೆ ಆಪಾದನೆ ಮಾಡಿದ್ದೇನೆ.

ಅಧ್ಯಕ್ಷರು.—ಮಾಡಿದ್ದೀರಿ ಗೊತ್ತಿದೆ.

ಶ್ರೀ ಎಸ್. ಗೋಪಾಲಗೌಡ.—ಅದ್ದರಿಂದ ಇದರ ವಿಚಾರಣೆ ಆಗಿಬಿಟ್ಟರೆ, ಚರ್ಚೆಯಾಗಿ ಬಿಟ್ಟರೆ ನಾವೇನು ತಪ್ಪು ಮಾಡಿದ್ದೇವೆ, ಮಾಡುತ್ತಾ ಇದ್ದೇವೆ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತೇವೆ, ಇದಕ್ಕೆ ಅವಕಾಶ ಕೊಡಬೇಕೆಂದು ನಾನು ಪ್ರಾರ್ಥನೆಮಾಡುತ್ತೇನೆ.

6-00 P.M.

ತಾವು ಸರಿಯಾದ ಶಬ್ದವನ್ನು ಬಳಸಲಿಲ್ಲ ಅಂತ ಹೇಳಿದಿರಿ. ನಾನು ಅಧ್ಯಕ್ಷರನ್ನು ರಿಮೂವ್ ಮಾಡಬೇಕೆಂದಿರುವುದರಿಂದ ಆಗ ಅವಿಶ್ವಾಸ ಎಂದು ಹೇಳಿದ್ದೆ. ತಾವು ಆದು ಸರಿಯಾದ ಪದವಲ್ಲ ಎಂದು ಹೇಳಿದ್ದರಿಂದ ಈಗ ರಿಮೂವಲ್ ಎಂದರೆ ನಿಮ್ಮನ್ನು ಕಿತ್ತುಹಾಕಬೇಕಾಗಿದೆ ಎಂಬ ಪದ ಸರಿಯಾದದ್ದು ಎಂದು ಹೇಳಿ, ಹಾಗೆ ನಿಮ್ಮನ್ನು ಕಿತ್ತು ಹಾಕುವುದಕ್ಕೆ ರೂಲ್ಸಿನಲ್ಲಿ ಬರತಕ್ಕ ಅಡ್ಡಿಯನ್ನು ತಪ್ಪಿಸುವುದಕ್ಕೆ ತಾವು ಆ ರೂಲನ್ನು ಸಸ್‌ಪೆಂಡ್ ಮಾಡಿ, ಈ ಮೋಷನ್ ಮೂವ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—The hon'ble member Sri S. Gopala Gowda seems to think that he can ignore all rules and yet insist upon engaging the attention of the House. I have repeatedly appealed to him to adhere to the rules. He desires that I should suspend the rules and permit him to move a motion that the Speaker be removed and it should be discussed immediately. He does not even read therules. If this is the kind of study and if this is the kind of action on the floor of the House, all that have to judge will judge. I may say that it cannot be moved on the day it is given. Time has to elapse and there are so many procedures to follow. Simply because something comes to his mind, he cannot ignore the rules.

ಶ್ರೀ ಎಸ್. ಗೋಪಾಲಗೌಡ.—ಅದಕ್ಕೇ ನಾನು ತಮಗೆ ಆ ರೂಲ್ಸ್‌ನ್ನು ಸಸ್‌ಪೆಂಡ್ ಮಾಡಿ ಎಂದು ಕೇಳಿಕೊಂಡಿದ್ದು.....

Mr. SPEAKER.—Order, order, order.....

ಶ್ರೀ ಎಂ. ಜಿ. ಬಣಕಾರ್.—ಸ್ವಾಮಿ, ನಾನು ಇಲ್ಲಗಾಗಲೆ ನಾಲ್ಕು ಸಾರ್ತಿ ಎದ್ದುಕುಳಿತು ದಾಯಿತು. ತಾವು ನನಗೆ ಅವಕಾಶವನ್ನೇ ಕೊಡಲಲ್ಲ.....

Mr. SPEAKER.—So, no vote should be taken ?

(*Interruptions*)

Sri H. Siddaveerappa said that he wanted three hours !

Sri H. SIDDAVEERAPPA.—I said two days.

Mr. SPEAKER.—I will put it to the House.

ಶ್ರೀ ಎಂ. ಜಿ. ಬಣಕಾರ್.—ಸ್ವಾಮಿ, ದಯವಿಟ್ಟು ನನಗೆ ಎರಡು ಮಾತುಗಳನ್ನಾಡುವುದಕ್ಕೆ ಅವಕಾಶಮಾಡಿಕೊಡಿ. ನಾನು ಈ ಸಭೆಯಗಮನಕ್ಕೆ ತರಬೇಕಾದ ಒಂದು ಮುಖ್ಯ ವಿಷಯ ಏನೆಂದರೆ—ಈ ದಿವಸ ಬೆಳಗಿನಿಂದ ಇಲ್ಲಿ ನಡೆಯುತ್ತಿರುವ ಕಾರ್ಯಕಲಾಪಗಳನ್ನು ನೋಡಿದರೆ ನಾವಿಲ್ಲಿಗೆ ಬಂದಿರತಕ್ಕದ್ದು ಮುಖ್ಯವಾಗಿ ಸದಸ್ಯರ ಹಾಗೂ ಮಂತ್ರಿಗಳ ಸಂಬಳವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿಯೇ ಈ ಅಧಿವೇಶನವನ್ನು ಕರೆದಿದ್ದಾರೇನೋ ಅನ್ನುವಂತೆ ಕಾಣುತ್ತಿದೆ. ಹೊರಗಡೆ ಇರತಕ್ಕ ಜನರು ನೀವು ಸದಸ್ಯರುಗಳೆಲ್ಲಾ ಆರುವಾರ ಸಭೆ ನಡೆಸಿ ನೀವು ಮಾಡಿದ್ದೀನು, ನೀವೆಲ್ಲರೂ ನಿಮ್ಮ ಸಂಬಳಸಾರಿಗೆಗಳನ್ನು ಹೆಚ್ಚಿಸಿಕೊಳ್ಳುವುದಕ್ಕೆ ಮಾತ್ರ ನೀವು ಸಭೆ ಸೇರಿದ್ದೀರಾ ಎಂದು ಕೇಳಿದರೆ ನಾವೇನು ಹೇಳಬೇಕು ? ಜನರು ಆ ರೀತಿ ಮಾತನಾಡಿಕೊಳ್ಳುವುದಕ್ಕೆ ಅವಕಾಶ ಕೊಡುವುದು ಬೇಡ. ಈ ದಿವಸದ ಪರಿಸ್ಥಿತಿಯೇನಾಗಿದೆ ಎಂಬುದನ್ನೂ ನಾವು ಗಮನಿಸಬೇಕು. ಈ ದಿನ ಆಡಳಿತಪಗ್ಷದವರಿಗೆ ಬಹುಮತ ಇದೆ ಅನ್ನುವ ಒಂದು ಅಹಂಕಾರದಿಂದ ವರ್ತಿಸುವುದು ಬೇಡ. ತಾವು ಈ ದಿವಸ 10 ಜನರು ಒಂದು ಕತ್ತೆಯನ್ನು ತಂದು ಅವರಲ್ಲಿ 8 ಜನರು ಅದು ಕುದುರೆ ಎಂದರೆ ಅದು ಕುದುರೆಯಾಗುತ್ತದೆಯೇ ? ಆ 8 ಜನರು ಅದು ಕುದುರೆ ಎಂದು ಕೈ ಎತ್ತಿದರೆ ಅದು ಕುದುರೆಯಾಗಿಬಿಡುತ್ತದೆಯೆ ? ಇಬ್ಬರು ಅದು ಕತ್ತೆಯೆಂದರೆ ಅದು ಕತ್ತೆಯಲ್ಲ, ಎಂಟು ಜನರು ಅದನ್ನು ಕುದುರೆ ಎಂದರೆ ಅದು ಕುದುರೆಯಾಗುತ್ತದೆ ಎಂಬ ನ್ಯಾಯವನ್ನು ಹಿಡಿಯುವುದು ಸರಿಯೇ? ಇಂಥ ಬಹುಮತಾಭಿಪ್ರಾಯಕ್ಕೆ ಪ್ರಜಾಪ್ರಭುತ್ವವೆನ್ನಬಹುದೆ ? ವಿರೋಧಪಕ್ಷದವರಿಗೆ ಇಲ್ಲಿ ಮೆಜಾರಿಟಿ ಇಲ್ಲ ಎಂಬುದು ಅಧ್ಯಕ್ಷರಿಗೆ ಚೆನ್ನಾಗಿ ಗೊತ್ತಿದೆ. ಹಾಗೆ ಗೊತ್ತಿದ್ದರೂ ತಾವು ಮಾತನಾಡಿದರೆ ಓಟಿಗೆ ಹಾಕುತ್ತೇನೆ ಎನ್ನುತ್ತೀರಿ. ಇಂಥಾ ವಿಚಾರಗಳಲ್ಲಿ ಸಭೆಯಲ್ಲಿರತಕ್ಕ ಪ್ರತಿಯೊಬ್ಬ ಸದಸ್ಯರ ಅಭಿಪ್ರಾಯವನ್ನು ಕೇಳಿದೆ, ಅವರ ಅನುಮತಿಯನ್ನು ಪಡೆಯದೆ ಹೇಗೆ ಓಟಿಗೆ ಹಾಕಲು ತಮಗೆ ಕಾಂಗ್ರೆಸ್ಸಿನವರು ಬೆಂಬಲ ಕೊಟ್ಟಿರಬಹುದು. ತಾವು ಇಲ್ಲಿ ಅನುಸರಿಸುತ್ತಿರುವ ವಿಧಾನ ಅದನ್ನು ಎತ್ತಿ ತೋರಿಸುತ್ತಿದೆ. ಅಷ್ಟೇ ಅಲ್ಲದೆ ನಮ್ಮ ಮೇಲೆ ತಾವು ಕಾನೂನಿನ ಬೆದರಿಕೆಯನ್ನು ಬೇರೆ ಹಾಕುತ್ತಿದ್ದೀರಿ. Man must have the power of the Devil ; but not act as Devil. ಎಂಬುದಾಗಿ ಒಬ್ಬ ಮಾಹಾ ಕವಿ ಹೇಳಿದ್ದಾನೆ. ಮನಷ್ಯನಲ್ಲಿ ರಾಕ್ಷಸ ಶಕ್ತಿ, ಬಲ ಇರಬೇಕು ; ಆದರೆ ಆ ಶಕ್ತಿಯನ್ನು ಅವನು ರಾಕ್ಷಸೀ ಕೃತ್ಯಗಳಿಗೆ ಬಳಸಬಾರದು. ಹಾಗೇ ತಮಗೂ ಅಪಾರವಾದ ಕಾನೂನಿನ ಬಲವಿದೆ. ತಮಗೆ ರೂಲ್ಸ್ ಆಫ್ ಪ್ರೊಸೀಜರಿನಲ್ಲಿ ಸಾಕಷ್ಟು ಅವಕಾಶವಿದೆ. ಆದರೆ ತಾವು ತಮ್ಮ ಕಾನೂನಿನ ಬಲವನ್ನು ನಮ್ಮ ಹಕ್ಕುಭಾಧ್ಯತೆಗಳಿಗೆ ಧಕ್ಕೆ ಬರತಕ್ಕ ರೀತಿಯಲ್ಲಿ ಬೆಳೆಸಬಾರದು. ಆದುದರಿಂದ ತಾವು ನಮ್ಮ ಹಕ್ಕು ಬಾಧ್ಯತೆಗಳನ್ನು ಉಳಿಸಿಕೊಂಡು ಅವನ್ನು ರಕ್ಷಣೆ ಮಾಡಿಕೊಂಡು ಬರುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಾನು ತಮ್ಮಲ್ಲಿ ಅತಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮಗೆ ಮೆಜಾರಿಟಿ ಇಲ್ಲ. ಇಲ್ಲ ಎಂಬುದು ತಮಗೆ ಚೆನ್ನಾಗಿ ಗೊತ್ತಿದೆ. ಮೆಜಾರಿಟಿ ಪಕ್ಷದವರು ಅವರ ಮನಸ್ಸಿಗೆ ಏನು ಬರುತ್ತದೋ ಅದನ್ನು ಅವರು ಮಾಡಬಹುದು. ಈ ದಿವಸ ನಾವು ಇಲ್ಲಿ ಪರಿಶೀಲನೆಬೇಕಾದ ಬಹು ಪ್ರಾಮುಖ್ಯವಾದಂಥ ವಿಚಾರಗಳು ಅನೇಕ ಇರುತ್ತದೆ. ಗಡಿ ಸಮಸ್ಯೆ ಇದೆ, ಬೆಂಗಳೂರಿನ ನೀರಿನ ಪ್ರಶ್ನೆ ಇದೆ. ಹೀಗೆ ಅತಿ ಪ್ರಾಮುಖ್ಯವಾದ ವಿಷಯಗಳು ಅನೇಕ ಇರುತ್ತವೆ. ಆದುದರಿಂದ ಮೊದಲು ನಮ್ಮ ಕಾರ್ಯಕ್ರಮದ ಪಟ್ಟಿಯಲ್ಲಿದ್ದ ಪ್ರಕಾರ ಆ ವಿಚಾರಗಳನ್ನು ಚರ್ಚೆಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ, ಅನಂತರ ಈ ಸಂಬಳದ ಪ್ರಶ್ನೆಯನ್ನು ಚರ್ಚೆಗೆ ತೆಗೆದುಕೊಳ್ಳಬಹುದು ಎಂದು ಸಲಹೆ ಮಾಡುತ್ತೇನೆ.

Sri H. SIDDAVEERAPPA.—May I say one thing ? We know you will put to the vote and we know how many.....

Mr. SPEAKER.—If he does not want let him say so.

Sri H. SIDDAVEERAPPA.—No. We want you to use your discretion, privilege and prerogative. You have seen me. If everything can be done mechanically by putting to vote, what can I say ? I certainly want to say so many things. We have to say something against you willy nilly mostly...

Mr. SPEAKER.—Will he think that anything that has happened...

Sri H. SIDDAVEERAPPA.—The only point is you have seen the sense of the House. If the opposition reflects nearly half the populace of the State or may be a little less, you will have to take into consideration that there is a large section who feel agigated on this subject. The only point is in view of this, I do not want it to be put to the vote of the House. If you still want to put, it is a different matter. Ultimately you say majority will have as way. I only want in view of the importance you must give us adequate time and if you want to be guided only by the show of hands, that is not the fair way of dealing with and correct way of dealing with the matter. That is not the equitable way of doing things. That is what I have to say.

Mr. SPEAKER.—Now, has Sri Siddaveerappa, made a suggestion or motion ?

Sri H. SIDDAVEERAPPA.—I made a suggestion.

Mr. SPEAKER.—Does he want me to put it to the House ?

Sri H. SIDDAVEERAPPA.—I want you to exerise your power.

Mr. SPEAKER.—How can I ?

Sri H. SIDDAVEERAPPA.—As a Speaker you heve to feel the pulse of the whole House and if you are satisfied there is not sufficient discussion on this Bill.....

Sri K. H. PATIL.—Sir, On a point of order. Under rule 300 it is the Speaker who can fix a time limit or give such time as may be necessary to make the people understand the consequences of the Bill before us and everything need not be put to the House. Vast power is given to the Speaker. Therefore, I am requesting Sri Siddaveerappa not to move it in the form of motion but to prevail upon the Speaker in the interest of justice to give such time as the opposition require so that we can enlighten the people on the point.

Sri H. SIDDAVEERAPPA.—I am much obliged to my friend. I was not moving a motion.

Mr. SPEAKER.—There is no motion and therefore I am not puting to the Vote of the House. Sri Patil pointed out that I have the power and nobody else has power. I think it is out of more fondness for me he imagines like that. The Advisory Committee has been constituted and when the when the report of the duly constituted committee has approved by the House, the matter rests with the House. I have communicated more than once that this is a matter which has

(Mr. SPEAKER)

come before the Business Advisory Committee. Simply trying to refer to some rule and say that I am the supreme authority and all that, is not correct.

† ಶ್ರೀ ಅಜೀಜ್ ಸೇಠ್.—ಸ್ಪೀಕರ್, ಇದರ ಬಗ್ಗೆ ನಾನು ತಮಗೆ ಒಂದು ಮಯಾ ಮೀಡಿಯಾ ಹೇಳುತ್ತೇನೆ. ಈ ಬಿಲ್ಲನ್ನು ಒಂದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿಬಿಟ್ಟರೆ ಇಷ್ಟೆಲ್ಲಾ ಸಂಕಷ್ಟಗಳು ಹೋಗುತ್ತವೆ ಮತ್ತು ಇದರಿಂದ ತಮಗೂ ಶಾಂತಿ ಸಮಾಧಾನಗಳು ದೊರೆಯುತ್ತವೆ ಮತ್ತು ಇಲ್ಲರುವ ಎಲ್ಲ ಸದಸ್ಯರುಗಳಿಗೂ ಸಮಾಧಾನವಾಗುತ್ತದೆ. ನಿಮಗೂ ಗೊತ್ತಿದೆ ಈ ರೀತಿಯಾಗಿ hot dicussion ಇಲ್ಲಿ ಮಾಡುವುದು ಸರಿಯಲ್ಲ. ಇದು ಸ್ವಲ್ಪ cool ಆಗಲಿ ತಮಗೂ ಕೂಡ ಸ್ವಲ್ಪ ಅವಕಾಶ ಸಿಗುತ್ತದೆ. ಆ ರೀತಿ ಮಾಡಬೇಕೆಂದು ನಲಹೆ ಮಾಡುತ್ತೇನೆ.

† ಶ್ರೀ ಎಸ್. ಶಿವಪ್ಪ.—ಮಾನ್ಯ ಅಧ್ಯಕ್ಷರೇ, ಮಂತ್ರಿಗಳ ಸಂಬಳ ಏರಿಕೆಯ ಮಸೂದೆ ಎಂದು ಇಲ್ಲಿ ಮಂಡಿಸಿರತಕ್ಕದ್ದನ್ನು ನಾನು ವಿರೋಧ, ಮಾಡುವುದಕ್ಕಾಗಿ ನಿಂತಿದ್ದೇನೆ.

ಇವೊತ್ತು ಮಂತ್ರಿಗಳ ಸಂಬಳ ಏರಿಕೆಯ ಮಸೂದೆಯನ್ನು ಮಾಡಬೇಕಾದ ಕರ್ತವ್ಯ ಈ ಮಂತ್ರಿ ಮಂಡಲದಲ್ಲಿ ಸಂಬಳ ಸಾರಿಗೆಗಳ ಖಾತೆಯನ್ನು ಹೊತ್ತಿರುವ ಮುಖ್ಯ ಮಂತ್ರಿಗಳು ಈ ಒಂದು ಮಸೂದೆಯನ್ನು ಮಂಡನೆ ಮಾಡಬೇಕಾಗಿತ್ತು. ಇಂತಹ ಜವಾಬ್ದಾರಿಯುತವಾದ ಕೆಲಸವನ್ನು ಅವರು ಮಾಡದೆ ಇದರ ಜವಾಬ್ದಾರಿಯನ್ನು ಒಬ್ಬ ಖಾಸಗೀ ಸದಸ್ಯರು ಈ ಮಸೂದೆಯನ್ನು ಇಲ್ಲಿ ಮಂಡಿಸುವಂತೆ ಮಾಡಿದ್ದಾರೆ. ಇದರಿಂದ ಮಾನ್ಯ ಮಂತ್ರಿಗಳೇ ಮಸೂದೆಗಳನ್ನು ಮಂಡಿಸುವ ಅರ್ಹತೆಯನ್ನು ಕಳೆದುಕೊಂಡು ಇದರ ಅರ್ಹತೆಯನ್ನು ಕೇವಲ ಒಬ್ಬ ಶಾಸನ ಸಭೆಯ ಸದಸ್ಯರಿಗೆ ಕೊಡುವುದು ಸಮಂಜಸವೇ ಎಂದು ನಾನು ಕೇಳುತ್ತೇನೆ. ಇಂತಹ ಒಂದು ಹೊಸ ದಾರಿಯನ್ನು ಹುಡುಕುವುದು ಸರಿಯೇ? ಇಂದಿನ ನನ್ನವೇಶದಲ್ಲಿ ನೀವು ಈ ಬಿಲ್ಲನ್ನು ತರಲು ಭಯವಾಗುತ್ತದೆ ಮತ್ತು ಇದಕ್ಕೆ ವಿರೋಧ, ಬರುತ್ತದೆ ಎಂದು ಇದನ್ನು ಬೇರೆಯವರ ಕೈಯಿಂದ ಮಾಡಿಸುವುದಕ್ಕೆ ಹೊರಟ್ಟಿದ್ದೀರಿ. ಇದರ ವಿಷಯಗಳೇನೇ ಇರಲಿ. ಇಂತಹ ವಿಚಾರಗಳಲ್ಲಿ ಎಲ್ಲ ಅರ್ಹತೆಗಳನ್ನೂ ಹೊಂದಿರುವ ಮುಖ್ಯಮಂತ್ರಿಗಳೇ ಇದಕ್ಕೆ ಸಂಬಂಧಪಟ್ಟ ವಿಚಾರಗಳನ್ನೂ ತಿಳಿದಿರುವುದರಿಂದ ಅವರೇ ಇಲ್ಲಿ ಈ ಮಸೂದೆಯನ್ನು ಮಂಡನೆ ಮಾಡಬೇಕಾಗಿತ್ತು. ಸಾಮಾನ್ಯ ಆಡಳಿತದ ಖಾತೆಯನ್ನು ಹೊತ್ತಿರತಕ್ಕವರು ನಮ್ಮ ದೇಶದ ಮುಖ್ಯ ಮಂತ್ರಿಗಳು. ಸಾಮಾನ್ಯ ಆಡಳಿತದ ಖಾತೆಯ ಬಾಬುಗಳಲ್ಲಿ ಬರತಕ್ಕದ್ದು ಮಂತ್ರಿಮಂಡಲದವರ ಸಂಬಳಸಾರಿಗೆಗಳೂ ಇರುವುದರಿಂದ ಅವರು ತಮಗೆ ಈಗ ಬರುತ್ತಿರುವ ಸಂಬಳಸಾರಿಗೆಗಳು ಕಡಿಮೆ ಅಥವಾ ಹೆಚ್ಚು ಎಂದು ಇಲ್ಲಿ ನೇರವಾಗಿ ಏತಕ್ಕೆ ಬಂದು ಹೇಳಬಾರದಾಗಿತ್ತು? ಇಂತಹ ಮಸೂದೆಗಳನ್ನು ಮಂಡನೆ ಮಾಡುವ ಜವಾಬ್ದಾರಿ ಅವರಿಗೆ ಇರುವುದು. ಬೇರೆಯವರು ಇದನ್ನು ಮಂಡನೆ ಮಾಡಬೇಕಾಗಿಲ್ಲ. ಬೇರೆಯವರಿಂದ ಇಂತಹ ಒಂದು ಮಸೂದೆಯನ್ನು ಇಲ್ಲಿ ತಂದು ತಮ್ಮ ಸಂಬಳಸಾರಿಗೆಗಳನ್ನು ಹೆಚ್ಚಿಸಿಕೊಳ್ಳಬೇಕೆಂದು ಮಾಡುತ್ತಿರುವ ವಾದವನ್ನು ಏತಕ್ಕಾಗಿ ಇಲ್ಲಿ ಆಡಬೇಕು? ಇಲ್ಲಿ ಬರುವ ಎಲ್ಲ ವಾದವಿವಾದಗಳಿಗೂ ನಮಜಾಯಿಸಿ ಕೊಡುವ ಜವಾಬುದಾರಿ ಮಂತ್ರಿ ಮಂಡಲಕ್ಕೆ ಸೇರಿದ್ದು. ಇದನ್ನು ಒಬ್ಬರು ಖಾಸಗಿ ವ್ಯಕ್ತಿ ಮಾಡುವುದಲ್ಲ. ಮುಖ್ಯ ಮಂತ್ರಿಗಳೇ ಇದರ ಜವಾಬ್ದಾರಿಯನ್ನು ಹೊತ್ತಿರತಕ್ಕವರು. ಇಂತಹವರು ಈ ನೇರವಾದ ದಾರಿಯನ್ನು ಬಿಟ್ಟು ಬೇರೆ ದಾರಿಯನ್ನು ಏತಕ್ಕೆ ಹುಡುಕಬೇಕು? ಇದು ನಿಮಗೆ ಕೊಟ್ಟಿರುವ ಅಧಿಕಾರದ ಹಕ್ಕು. ನಿಮಗೆ ಮುಖ್ಯ ಮಂತ್ರಿಗಳ ಖಾತೆಯನ್ನು ಕೊಟ್ಟಿರುವುದರಿಂದ ನಿಮ್ಮಿಂದ ಇದರ ಬಗ್ಗೆ ಉತ್ತರಗಳನ್ನು ಪಡೆಯುವ ಹಕ್ಕನ್ನೂ ನೀವೇ ಕಳೆದುಕೊಂಡಿದ್ದೀರಿ. ನಿಮ್ಮ ಘನತೆಗೆ ಕುಂದು ಬರುವ ರೀತಿಯಲ್ಲಿ ನೀವು ಈ ರೀತಿ ಮಾರ್ಗ ಅನುಸರಿಸಿರತಕ್ಕದ್ದು ತುಂಬಾ ಖಂಡನೀಯ. ನಾನು ಈ ಮಸೂದೆಯಲ್ಲಿ ಅಡಕವಾಗಿರುವ ವಿಷಯಗಳಿಗೆ ಹೋಗುವುದಕ್ಕೆ ಮುಂಚೆ ಇವೊತ್ತು ಇಂತಹ ಸಂಬಳ ಸಾರಿಗೆಗಳು ಮಂತ್ರಿಗಳಿಗೆ ಬೇಕಾಗಿದೆಯೇ ಎನ್ನುವುದು ಬಹು ಮುಖ್ಯ. ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಶಿದ್ದಯ್ಯ ಕಾಶೀಮಠರವರು ಇಲ್ಲಿ ಶಾಸನಕರುಗಳ ಸಂಬಳ ಸಾರಿಗೆಗಳ ಮಸೂದೆಯನ್ನು ತಂದಾಗ ಅವರು ಏತಕ್ಕೋಸ್ಕರ ಇದನ್ನು ತಂದೆ ಎಂದು ಹೇಳುವಾಗ ಈಗ ಕೊಡತಕ್ಕ ಸಂಬಳ ನನಗೆ ಸಾಲದು, ನಾನು ಇನ್ನೂ ಹೆಚ್ಚು ಕೆಲಸಗಳನ್ನು ಮಾಡಬೇಕಾಗಿರುವುದರಿಂದ ನಮಗೆ ಇನ್ನೂ ಸಂಬಳ ಬೇಕಾಗಿದೆ, ಅದಕ್ಕೋಸ್ಕರ ಈ ಮಸೂದೆಯನ್ನು ತಂದಿದ್ದೇನೆ ಎಂದು ಹೇಳಿದರು. ಅದಕ್ಕೇನೋ ಅಕ್ಷೇಪಣೆಗಳು ಬಂದರೂ ಅದನ್ನು ಹೇಗಾದರೂ ಪಾಸುಮಾಡಬೇಕು ಎಂದು ಇಲ್ಲಿ ತಂದರು. ಆದರೆ ಇಲ್ಲಿ ಮಂತ್ರಿಗಳ ಸಂಬಳ ಸಾರಿಗೆಗಳನ್ನು ಹೆಚ್ಚು ಮಾಡ

ಬೇಕೆಂದು ತಂದಿರುವ ಮನೂದೆಗೆ ಯಾವ ವಿವರಗಳನ್ನೂ ಹೇಳದೇ ಹಾಗೇ ಬಿಟ್ಟರು. ಯಾರು ಈ ದೇಶದ ಮುಖ್ಯ ಜವಾಬ್ದಾರಿಗಳನ್ನು ಹೊತ್ತಿದ್ದಾರೋ ಅಂತಹ ಮುಖ್ಯ ಮಂತ್ರಿಗಳು ನಮ್ಮ ದೇಶ ದಲ್ಲಿರುವ ಮಂತ್ರಿಗಳ ಮೆಚ್ಚ ಬಹಳ ಹೆಚ್ಚಾಗಿದೆ ಮತ್ತು ಜೀವನ ನಡೆಸುವುದು ಕಷ್ಟವಾಗಿದೆ ಎಂದು ಇಲ್ಲ ಹೇಳುವ ಸಾಹಸಕ್ಕೇ ಹೋಗದೆ ಸುಮ್ಮನಿದ್ದಾರೆ. ಅವರು ಇಂತಹ ಒಂದು ಬಿಲ್ಲನ್ನು ಇಲ್ಲ ತಂದು ಪಾಸು ಮಾಡಿಸುವ ಎದೆಗಾರಿಕೆತಾನೇ ಅವರಿಗೆಲ್ಲದೆ ? ಇವೊತ್ತು ಯಾವ ರೀತಿ ಶ್ರೀಮಾನ್ ಶಿದ್ದಯ್ಯ ಕಾಶೀಮಠರವರು ತಮ್ಮ ಕುಂದುಕೊರತೆಗಳನ್ನು ಶಾಸಕರ ಪರವಾಗಿ ಅವರು ಸಭೆಯ ಮುಂದೆ ಇಟ್ಟರೋ ಅದೇ ರೀತಿ ಮಂತ್ರಿಮಂಡಲದವರ ಪರವಾಗಿ ಹೇಗೆತಾನೇ ಹೇಳಬಲ್ಲರು ? ಮುಖ್ಯ ಮಂತ್ರಿಗಳು ಇಂತಹ ಮುಖ್ಯ ಖಾತೆಯ ಜವಬ್ದಾರಿಗಳನ್ನು ಹೊತ್ತಿರತಕ್ಕವರು ಇವೊತ್ತು ಸಭೆಯ ಮುಂದೆ ಬಂದು ಇವನ್ನೆಲ್ಲಾ ಅವರೇ ಹೇಳಬೇಕಾಗಿತ್ತು, ತಮಗೆ ಯಾವರೀತಿಯಾದ ಕಷ್ಟಗಳಿವೆ, ಜೀವನ ಮಟ್ಟ ಏರಿದೆ ಮತ್ತು ತಮಗೆ ಇನ್ನೇನು ಕಷ್ಟಗಳಿವೆಯೋ ಅವನ್ನೆಲ್ಲಾ ಹೇಳಿ ಮಂತ್ರಿಗಳಿಗೂ ಕೂಡ ಅವರ ಕಾರ್ಯಗಳನ್ನು ಮಾಡುವುದಕ್ಕೆ ಈಗ ಕೊಡತಕ್ಕ ಸಂಬಳ ಸಾರಿಗೆಗಳು ಸಾಲದು ಮತ್ತು ಈಗ ದೊರಕುತ್ತಿರುವ ಸಲವತ್ತುಗಳು ಸಾಲದು ಇದರಿಂದ ಇಷ್ಟುಮಟ್ಟಿಗೆ ಕೆಲಸ ಮಾಡುವುದಕ್ಕೆ ಆಡಚಣೆಗಳಾಗಿವೆ ಎಂದು ಎಲ್ಲ ಮಂತ್ರಿಗಳ ಪರವಾಗಿ ಇಲ್ಲಿ ಕೇಳಬಹುದಾಗಿತ್ತು. ಇದು ಬಿಟ್ಟು ಶ್ರೀಮಾನ್ ಶಿದ್ದಯ್ಯ ಕಾಶೀಮಠರವರಂತಹ ಸಾಮಾನ್ಯ ಸದಸ್ಯರ ಮುಖೇನ ಈ ಮನೂದೆಯನ್ನು ಮಡಿಸಿದರೆ ಅವರೇನು ತಾನೇ ಹೇಳಿಯಾರು ? ನಿಮ್ಮ ಪರವಾಗಿ ವಾದ ಮಾಡುವು ದಕ್ಕೆ ಆಗುತ್ತದೆಯೇ ? ನಿಮ್ಮ ಕರ್ತವ್ಯಗಳೇನು ಎನ್ನುವುದರ ಅರಿವಾದರೂ ಅವರಿಗಿದೆಯೇ ? ನಿಮಗೆ ಈ ಸಭೆಯ ಮುಂದೆ ಅಂತಹ ಎದೆಗಾರಿಕೆ ಇದ್ದಿದ್ದರೆ ನಮಗೆ ಇನ್ನೂ ಹೆಚ್ಚು ಸಂಬಳ ಬೇಕು, ನಮಗೆ ಕಷ್ಟಗಳಿಗೆ ಎನ್ನುವ ಧೈರ್ಯವನ್ನಾದರೂ ಮಾಡಿ ಇಲ್ಲಿ ಹೇಳಿದಿರಾ ? ಏನೋ ಸರಕಾರ ಆಳಿರಿ ಎಂದು ನಿಮ್ಮ ಕೈಗೆ ಅಧಿಕಾರ ಕೊಟ್ಟಿದ್ದರೆ ನೀವೇ ಬಂದು ನಮಗೆ ಇಂತಹ ಕಷ್ಟಗಳಿವೆ ನಮಗೆ ಇನ್ನೂ ಜಾಸ್ತಿ ಹಣ ಕೊಡಿರಿ ಎಂದು ಹೇಳಿದ್ದರೆ ನೀವು ಅದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿತ್ತು. ಅದೊಂದನ್ನೂ ಮಾಡದೆ ಇಂತಹ ನೀತಿ ಬಾಹಿರವಾದ ಕೆಲಸಕ್ಕೆ ಏತಕ್ಕಾಗಿ ಕೈ ಹಾಕಿದಿರಿ ಎಂದು ನಾನು ಇಲ್ಲಿ ಕೇಳಬೇಕಾಗಿದೆ. ಮುಖ್ಯಮಂತ್ರಿಗಳು ರಾಜ್ಯದ ಜವಾಬುದಾರಿಯನ್ನು ಹೊತ್ತುಕೊಂಡು ಈ ದೇಶದ ಮುಖ್ಯ ಆಡಳಿತವನ್ನು ಹಿಡಿದಿರುವವರು ಇಂತಹ ಮನೂದೆಯನ್ನು ಏತಕ್ಕಾಗಿ ಇಲ್ಲಿ ಮಂಡನೆ ಮಾಡಿಲ್ಲ ? ಇದರ ಬಗ್ಗೆ ಏಕೆ ಏನೂ ಹೇಳುತ್ತಿಲ್ಲ ? ನಿಮ್ಮ guilty conscience ನಿಮಗೆ ಈ ರೀತಿ ಕೆಲಸಗಳನ್ನು ಮಾಡಬಾರದು ಎಂದು ಹೇಳುತ್ತಿದೆ ಮತ್ತು ಇದನ್ನು ಯಾವ ಅಳತೆಕೋಲಿನಲ್ಲಿ ಅಳೆದು ನಿಮ್ಮ ಕೆಲಸ ಕಾರ್ಯಗಳು ಹೆಚ್ಚಾಗಿವೆ ಎಂದು ಹೇಳುತ್ತಿದ್ದೀರಿ ? ಇವೊತ್ತು ಅನೇಕ ಕಾರ್ಯಗಳನ್ನು ಮಾಡಿ ನಿಮ್ಮ ಸಂಪತ್ತನ್ನು ಹೆಚ್ಚು ಮಾಡಿಕೊಂಡು ಜೀವನ ನಡೆಸುತ್ತಿದ್ದೇವೆ. ಮಂತ್ರಿಗಳಿಗೇನೂ ಕಷ್ಟಗಳಿಲ್ಲ ಎಂದು ನಾನು ಹೇಳುತ್ತಿಲ್ಲ. ಮಂತ್ರಿಗಳು ದಷ್ಟ ಪುಷ್ಟವಾಗಿರಬೇಕು, ಚೆನ್ನಾಗಿ ಕೆಲಸ ಮಾಡಬೇಕು ಅಂತ ನಮಗೂ ಆಸೆ. ಅದರೆ ಕೈಯ್ಯಿ ಬಾಯಿ ಚೆನ್ನಾಗಿಟ್ಟುಕೊಂಡು ಕೆಲಸ ಮಾಡಲು ಎಷ್ಟು ಹಣ ಬೇಕು ಹೇಳಿ, ಕೊಡೋಣ. ಅಲ್ಲದೆ ನನಗೆ ಗೊತ್ತಿರುವಂತೆ ನಮ್ಮ ದೇಶದ ಮಂತ್ರಿಗಳು ಅನೇಕ ರೀತಿಯಲ್ಲಿ ಸುಖವಾದ ಜೀವನವನ್ನು ಮಾಡುತ್ತಿದ್ದಾರೆ ಮತ್ತು ಅವರಿಗಿರುವ ಸಲವತ್ತುಗಳು ಚೆನ್ನಾಗಿಯೇ ಇವೆ. ಇಂದು ಬೆಳಗ್ಗೆ ಪ್ರಶ್ನೋತ್ತರ ಕಾಲದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಅವರ ಮಕ್ಕಳ ವ್ಯವಹಾರಗಳ ಬಗ್ಗೆ ಕೇಳಿದಾಗ ಅವರಿಗೂ ನಮಗೂ ಏನೂ ಸಂಬಂಧವಿಲ್ಲ ಎನ್ನುವ ಒಂದು ಅಂಶ ದಿಂದಲೇ ನಮಗೆ ಇವರು ಹೇಗೆ ಜೀವನ ಮಾಡುತ್ತಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಅವರಿಗೆ ನಿಜವಾಗಿಯೂ ಈ ದೇಶದಲ್ಲಿ ಜೀವನವನ್ನು ನಡೆಸುವುದು ಕಷ್ಟವಾಗಿದ್ದಿದ್ದರೆ ಅವರೇ ಇಲ್ಲಿ ಇಂತಹ ಮನೂದೆಯನ್ನು ತಂದು ಮಂಡಿಸುವುದಕ್ಕೆ ಹಿಂಜರಿಯುತ್ತಿರಲಿಲ್ಲ. ಅವರೇಕೆ ನೇರವಾಗಿ ಬಂದು ಹೇಳಲಿಲ್ಲ. ಎನ್ನುವುದು ನಮಗೆ ಚೆನ್ನಾಗಿಯೇ ಗೊತ್ತಾಗುತ್ತದೆ. ಈ ರಾಜ್ಯವನ್ನು ಆಳಬೇಕು ಎಂದು ಜನ ನಿಮ್ಮ ಕೈಗೆ ಅಧಿಕಾರವನ್ನು ಕೊಟ್ಟು ಆಳುತ್ತಿರುವಾಗ ಇದನ್ನೆಲ್ಲಾ ಮಾಡುವುದು ನಾನಲ್ಲ ಎಂದು ನೀವು ಹೇಳುವುದಕ್ಕಾಗುವುದಿಲ್ಲ. ದೇಶದ ಜನ ಇಂದು ನಿಮ್ಮನ್ನು ಹೊಟ್ಟೆ ತುಂಬ ಅನ್ನ ಮತ್ತು ಹೊದೆಯುವುದಕ್ಕೆ ಬಟ್ಟೆ ಕೊಟ್ಟು ಚೆನ್ನಾಗಿ ಕಾಪಾಡಿ ಎಂದು ಕೇಳಿದರೆ ನೀವು ಈ ರೀತಿ ಮಾಡುತ್ತಿದ್ದೀರಿ. ನಮಗೆ ಈಗ ಕೊಡುತ್ತಿರುವ ದುಡ್ಡು ಸಾಲದು ಎಂದು ನೀವೆ ಕೇಳಿ. ನಿಮಗೆ ಎಷ್ಟುಬೇಕೋ ಅಷ್ಟು ದುಡ್ಡನ್ನು ಕೊಡುತ್ತೇವೆ. ಇವೊತ್ತು ಶಾಸಕರ ಸಂಬಳ 250 ಇದ್ದದ್ದನ್ನು ಇನ್ನೂ 150 ಹೆಚ್ಚು ಬೇಕು ಎಂದು ಪಾಸು ಮಾಡಿಯಾಯಿತು. ತಾವೂ ಕೂಡ ನಮಗೆ ಇಷ್ಟು ಖರ್ಚಾಗುತ್ತಿದೆ ಎಂದು ಒಬ್ಬ ಶಾಸಕರಿಗೆ ಹೇಗೆ ಕೊಟ್ಟಿದ್ದಾರೋ ಅದರಂತೆ ನೀವು ಖರ್ಚು ಬರುತ್ತದೆ ಎಂದು ಒಂದು ಲೆಕ್ಕವನ್ನು ಈ ಸಭೆಗೆ ಕೊಡಬೇಕು ಮತ್ತು ಆಗ ನೀವು ಹೇಳು ವಾಗ ನಿಮ್ಮ ಸಿಬ್ಬಂದಿಗೆ ಎಷ್ಟು ಖರ್ಚು ಬರುತ್ತೆ ಮತ್ತು ನಿಮ್ಮ ಮಂತ್ರಿಮಂಡಲದವರಿಗೆ ಎಷ್ಟು ಖರ್ಚುಬೇಕು, ನಿಮ್ಮ ಹೂದೋಟಗಳಿಗಾಗಿ ಎಷ್ಟು ಬೇಕು ಇತ್ಯಾದಿ ಎಲ್ಲ ಬಾಬುಗಳಿಗೂ ಎಷ್ಟು

(ಶ್ರೀ ಎಸ್. ಶಿವಪ್ಪ)

ಹಣ ಬೇಕು ಎನ್ನುವುದರ ಲೆಕ್ಕ ಹೇಳುವ ಜವಾಬ್ದಾರಿ ಮುಖ್ಯ ಖಾತೆ ಹೊಂದಿರುವ ಮುಖ್ಯ ಮಂತ್ರಿಗಳಿಗೇ ಸೇರಿದ್ದು, ಅವರೇ ಇದನ್ನೆಲ್ಲಾ ಹೇಳಬೇಕಾಗಿತ್ತು. ಇಂತಹ ಜವಾಬುದಾರಿಗಳೊಂದೂ ಇಲ್ಲದ ಶ್ರೀ ಸಿದ್ಧಯ್ಯ ಕಾಶೀಮಠ ರವರು ಇವನ್ನೆಲ್ಲಾ ಹೇಗೆ ತಾನೇ ಹೇಳಿ ಯಾರು? ಇವೊತ್ತು ನಮ್ಮ ದೇಶದ ಖಜಾನೆಯಿಂದ ನಮ್ಮ ದೇಶದ ಮುಖ್ಯ ಮಂತ್ರಿಗಳಿಗೆ ಹಾಗೂ ಅವರ ಶಿಬ್ಬಂದಿಯ ವರಿಗೆ ಎಷ್ಟು ಖರ್ಚಾಗುತ್ತಿದೆ ಎನ್ನುವುದನ್ನು ಸರಿಯಾಗಿ ಪರಿಶೀಲನೆ ಮಾಡಿ ನೋಡಿದರೆ, ಒಬ್ಬ ಮುಖ್ಯ ಮಂತ್ರಿಗಳಿಗೆ ನಮ್ಮ ದೇಶದಲ್ಲಿ ಒಂದು ತಿಂಗಳಿಗೆ ಹತ್ತು ಸಾವಿರ ರೂಪಾಯಿಗಳಷ್ಟು ಖರ್ಚಾಗುತ್ತಿದೆ. ಎಂದರೆ ಒಂದು ದಿವಸಕ್ಕೆ ಮುನ್ನೂರು ರೂಪಾಯಿಗಳಷ್ಟು ಖರ್ಚು ಮಾಡುತ್ತಿರುವ ಮುಖ್ಯ ಮಂತ್ರಿಗಳು ನಮ್ಮ ದೇಶದಲ್ಲಿದ್ದಾರೆ. ಬೇರೆ ಮಂತ್ರಿಗಳೂ ಕೂಡ ಒಂದು ದಿವಸಕ್ಕೆ ಇನ್ನೂರು ರೂಪಾಯಿಗಳಷ್ಟು ಖರ್ಚು ಮಾಡುತ್ತಿದ್ದಾರೆ. ನಮ್ಮ ದೇಶದ ಖಜಾನೆಯಿಂದ ಒಬ್ಬೊಬ್ಬ ಮಂತ್ರಿಗಳಿಗೆ ಐದಾರು ಸಾವಿರ ರೂಪಾಯಿಗಳಷ್ಟು ಖರ್ಚಾಗುತ್ತಿದೆ.

ಇಷ್ಟೆಲ್ಲಾ ನಮ್ಮ ದೇಶದಲ್ಲಿರುವ ಮಂತ್ರಿಗಳಿಗಾಗಿ ಖರ್ಚು ಮಾಡುತ್ತಾರೆ ಎಂದರೆ ಇದು ನಮಾಜ ವಾದದ ಮಾದರಿಯು ಖರ್ಚು ಮಾಡುವಂತೆ ಮಾಡುತ್ತಿದ್ದಾರೆಯೇ? ದೇಶದಲ್ಲಿ ಸುಖೀ ರಾಜ್ಯ ಸ್ಥಾಪನೆಯಾಗಬೇಕು ರಾಜ್ಯದ ಹಿತದೃಷ್ಟಿಯನ್ನು ಕಾಪಾಡಬೇಕು ಎಂದು ಈ ದೇಶದಲ್ಲಿ ಜಾರಿಗೆ ತರಬೇಕು ಎಂದು ಹೇಳುತ್ತಿದ್ದಾರೆ. ಮಂತ್ರಿಗಳು ತಮ್ಮ ವೈಭವ ಜೀವನ ನಡೆಸುವುದಕ್ಕಾಗಿ ಒಂದು ತಿಂಗಳಿಗೆ ಸುಮಾರು ಐದಾರು ಸಾವಿರ ರೂಪಾಯಿಗಳಷ್ಟು ಖರ್ಚು ಮಾಡುತ್ತಿದ್ದಾರೆ. ಇದು ನಿಜವಾದ ನಮಾಜ ವಾದವೇ? ಇದರಿಂದ ನಮಾಜ ವಾದದ ಗುರಿಯತ್ತ ಹೋಗಲು ಸಾಧ್ಯವೇ ಎನ್ನುವ ಪ್ರಶ್ನೆಯನ್ನು ನಾನು ಇಲ್ಲಿ ಕೇಳುವವನಾಗಿದ್ದೇನೆ. ಇವತ್ತು ಈ ಮಂತ್ರಿಗಳಿಗೆ ಈ ಮಸೂದೆಯಲ್ಲಿ ಅಡಕವಾಗಿರುವ ದುಡ್ಡು ಒಂದು ಕಡೆ ಇರಲಿ, ಈಗ ಇವರ ಖರ್ಚಿನ ವೈಖರಿ ಹೇಗಿದೆಯೆಂದರೆ, ವಾಸಮಾಡುವುದಕ್ಕೆ ದೊಡ್ಡ ದೊಡ್ಡ ಬಂಗಲೆಗಳು, ಇವರಿಗೆ ತಿರುಗಾಡುವುದಕ್ಕೆ ಕೊಟ್ಟಿರತಕ್ಕ ದೊಡ್ಡ ದೊಡ್ಡ ಕಾರುಗಳು, ಅವನ್ನು ಒಂದು ವರ್ಷಕ್ಕೆ ಇವರು ಎಷ್ಟು ಸಾರಿ ಬದಲಾಯಿಸುತ್ತಾರೋ ಗೊತ್ತಿಲ್ಲ, ರಿಪೇರಿಗಾಗಿ ಅವುಗಳಿಗೆ ಎಷ್ಟೋ ದುಡ್ಡನ್ನು ಖರ್ಚು ಮಾಡಿದ್ದಾರೆ. ಎಲ್ಲದಕ್ಕೂ ಲೆಕ್ಕಗಳಿವೆ. ಇವರು ಕಾರುಗಳನ್ನು ರಿಪೇರಿ ಮಾಡತಕ್ಕ ಖರ್ಚಿನಲ್ಲಿ ಮತ್ತೊಂದು ಮಂತ್ರಿಮಂಡವನ್ನು ರಚನೆಮಾಡಬಹುದಾಗಿತ್ತು. ಇವರ ಹೂತೋಟಗಳಿಗೆ ಹಾಗೂ ಇವರ ಮನೆ ಶೃಂಗಾರಕ್ಕೆ ಎಷ್ಟೆಷ್ಟು ಖರ್ಚುಮಾಡಿದ್ದಾರೆಂಬುದನ್ನು ಹೇಳಲಿ. ಅದಕ್ಕೆ ಲೆಕ್ಕವಿದೆ. ಇವತ್ತು ಈ ಮಸೂದೆಗೆ ಪ್ರಾಮುಖ್ಯತೆಬೇಕು. ಈ ಮಸೂದೆಯಲ್ಲಿ ನಮೂದಿರುವ ಹಣವನ್ನು ಪಡೆಯತಕ್ಕ ವ್ಯಕ್ತಿಗಳು ಬಹಳ ದೊಡ್ಡವರು, ಮಂತ್ರಿಗಳ ತೂಕಕ್ಕೆ ಸರಿಯಾಗಿ ಈ ಮಸೂದೆಯ ಚರ್ಚೆಯೂ ದೊಡ್ಡದಾಗಬೇಕು. ಇದು ಈ ದೇಶವನ್ನು ಆಳತಕ್ಕ ವ್ಯಕ್ತಿಗಳು ಹಾಗೂ ಮಂತ್ರಿಗಳಿಗೆ ಸಂಬಂಧಪಟ್ಟ ಚರ್ಚೆಗೆ ಮೂರು ದಿವಸಗಳಾದರೂ ಪರವಾ ಇಲ್ಲ. ಏಕೆಂದರೆ ಮಾನ್ಯ ಶ್ರೀ ಕಂರಿಯವರೇ, ಸೋಮವಾರ, ಮಂಗಳವಾರ, ಬುಧವಾರ—ಈ ಮೂರು ದಿನಗಳೂ ಈ ಚರ್ಚೆ ನಡೆಯಲಿ ಎಂದು ಹೇಳಿದ್ದಾರೆ. ಆದರೆ ಇದು ದೇಶಕ್ಕೆ ಚೆನ್ನಾಗಿ ತಿಳಿಯಬೇಕು. ಇವರ ಸಂಬಳದ ವಿಚಾರ ಇಲ್ಲಿ ಚರ್ಚೆಗೆ ಬಂದಾಗ ಇವರು ಯಾವ ರೀತಿಯಾಗಿ ದೇಶಕ್ಕಾಗಿ ಕೆಲಸ ಮಾಡಿದ್ದಾರೆಂಬುದನ್ನು ಜನತೆ ಮನಗಾಣಬೇಕು. ಆದ್ದರಿಂದ ಇವರು ಸುಮ್ಮನೆ ಪಾಸ್ತಿಯಾಗಿ ಸಂಬಳ ಕೇಳಿದರೆ ಕೊಡುವುದಕ್ಕೆ ಸಾಧ್ಯವೇ? ಇವರಲ್ಲಿ ಅನೇಕ ವಿಚಾರಣೆಗೆ ಗುರಿಯಾಗಿದ್ದಾರೆ. ಇವರು ಈ ದೇಶದಲ್ಲಿ ಮಾಡಿದಂಥ ಅನೇಕ ತಪ್ಪುಗಳ ಪರಂಪರೆಯನ್ನು ಈ ಸಭೆಯಲ್ಲಿ ವಿಶದವಾಗಿ ಹೇಳುವುಕ್ಕೆ ತಾವು ನಮಗೆ ಖಂಡಿತವಾಗಿ ಅವಕಾಶ ಕೊಡಬೇಕು. ಇಲ್ಲದಿದ್ದರೆ ನಾವು ಈ ಮಸೂದೆಯ ಪ್ರಕಾರ ಅವರಿಗೆ ಸಂಬಳ ಕೊಡುವುದಕ್ಕೆ ಸಾಧ್ಯವಿಲ್ಲ. ಒಬ್ಬೊಬ್ಬ ಮಂತ್ರಿಯೂ ಅವರವರ ಕಾಲದಲ್ಲಿ ಏನೇನು ಮಾಡಿದ್ದಾರೆಂಬುದನ್ನು ಹೇಳುವುದಕ್ಕೆ ಸಾಕಷ್ಟು ಅವಕಾಶವನ್ನು ನಮಗೆ ಕೊಡಬೇಕೆಂದು ತಮ್ಮನ್ನು ಪ್ರಾರ್ಥನೆ ಮಾಡುತ್ತೇನೆ. ಇವತ್ತು ಮೈಸೂರು ಮಂತ್ರಿಮಂಡಲ 14 ಜನರು ಮಂತ್ರಿಗಳಾಗಿ ಕ್ಯಾಬಿನೆಟ್ ರ್ಯಾಂಕಿನಲ್ಲಿಯೂ, 8 ಜನ ಉಪಮಂತ್ರಿಗಳಾಗಿಯೂ ಮತ್ತು ಇಬ್ಬರು ಪಾರ್ಲಿಮೆಂಟರಿ ಸೆಕ್ರೆಟರಿಗಳಾಗಿಯೂ ಇರುವುದಾಗಿದೆ. ಇವೊತ್ತು, ಈ ದೇಶದ ಅಡಳಿತವನ್ನು ನಿರ್ವಹಿಸುವುದಕ್ಕೆ ಇಷ್ಟೊಂದು ಜನ ಬೇಕೇ ಎಂದು ಕೇಳಬೇಕಾಗಿದೆ.

Mr. SPEAKER.—This is not a no-confidence motion. I have got a large list of names. If members want I can apportion time.

ಶ್ರೀ ಎಚ್. ಸಿದ್ಧವೀರಪ್ಪ.—ತಾವು ಈಗ ನಮ್ಮ ನಾಯಕರು ಮಾತನಾಡುತ್ತಾ ಇರಬೇಕಾದರೆ, ಇಷ್ಟೇ ಚೈಂ ನಿಗದಿಮಾಡಿ ಇಷ್ಟೇ ಗಂಟೆಗೆ ಇದು ಮುಗಿಯಬೇಕೆಂದು ಹೇಳುತ್ತಿದ್ದೀರಿ.

ಅಧ್ಯಕ್ಷರು.—7 ಗಂಟೆಗೆ ಎಂದು ಹೇಳಿದ್ದೇನೆ.

ಶ್ರೀ ಎಚ್. ಸಿದ್ಧವೀರಪ್ಪ.—7 ಗಂಟೆಗೆ ಖಂಡಿತವಾಗಿ ಆಗುವುದಿಲ್ಲ. ಗಿಲ್ಲೊಟಿನ್ ಅಪ್ಲೈ ಮಾಡುವುದಕ್ಕೆ ಹೋಗಬೇಡಿ. ಅದರಿಂದೇನೂ ಸಾಧನೆಯಾಗುವುದಿಲ್ಲ. ಇದಕ್ಕೆ ನರಿಯಾದ ಪೂರ್ತಿ ಚರ್ಚೆಗೆ ಕಾರಾವಕಾಶವನ್ನು ಕೊಡಬೇಕು. ಮಂತ್ರಿಮಂಡಲದ ವಿಚಾರವಾಗಿ ಹೇಳುವುದಕ್ಕೆ ಮಹತ್ತರವಾದ ವಿಚಾರಗಳಿವೆ. ಇವರು ಕೇಳತಕ್ಕದ್ದು ಆ ರೀತಿ ಬಂದಿದೆ. ಅದಕ್ಕೆ ಇವರ ರಾಜಕೀಯ ಏನೇ ಇರಲಿ, ಆ ವಿಚಾರದಲ್ಲಿ ಸುದೀರ್ಘವಾಗಿ ಚರ್ಚೆಮಾಡಬೇಕಾಗಿದೆ. ಅಂತೂ 7 ಘಂಟೆಗೆ ಖಂಡಿತ ಆಗುವುದಿಲ್ಲ. They are set face against it.

Mr. SPEAKER.—I will carry out the order of the House and it will be closed at 7 O'Clock.

Sri H. SIDDAVEERAPPA.—It will be stifling the discussion. We are not prepared for that decision.

ಶ್ರೀ ಎಸ್. ಶಿವಪ್ಪ.—ಈಗ ಕಾಂಗ್ರೆಸ್ಸಿನವರು ಈ ಚರ್ಚೆಯನ್ನು ಅದಷ್ಟು ಕುಂಠಿತ ಮಾಡಿ ಎಂದು ಹೇಳಬಹುದು. ಆದರೆ ನಾವು ಅದನ್ನು ಒಪ್ಪುವುದಕ್ಕಾಗುವುದಿಲ್ಲ.

Mr. SPEAKER.—Sri Azeez Sait participating in the Debates?

Sri AZEEZ SAIT.—I am trying to help you to find out a way.

Mr. SPEAKER.—If the resolution of the House is that it should be closed by 7 P.M. I am bound to carry it out. The member cannot give me a direction to say that I must extend the time. I am bound by the decision of the House.

Sri H. SIDDAVEERAPPA.—It is not the decision of the House. Probably, it may be the decision of one party which has vital interest in this. What I am saying is that it cannot be said that this is the decision of the House.

Mr. SPEAKER.—I do not know what the member has in his mind. I declared in the open House that this subject will be closed at 7 P.M.

ಶ್ರೀ ಎಸ್. ಶಿವಪ್ಪ.—ಚರ್ಚೆಯನ್ನು ಪೂರ್ತಿಯಾಗಿ ಮಾಡುವವರೆಗೂ ಇದನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ಏಳು ಗಂಟೆಗಂತೂ ಖಂಡಿತ ಇದು ಮುಗಿಯುವುದಕ್ಕಾಗುವುದಿಲ್ಲ. ಇನ್ನೂ ಅನೇಕ ಸದಸ್ಯರು ಇದರಲ್ಲಿ ಭಾಗ ವಹಿಸಬೇಕೆಂದಿದ್ದಾರೆ.

Mr. SPEAKET.—Unless the House extends the time, I can do nothing else but to put it to vote at 7 O'clock.

ಶ್ರೀ ಎಚ್. ಸಿದ್ಧವೀರಪ್ಪ.—ನಮ್ಮಲ್ಲಿ ಅವರಿಗೆ ಎಷ್ಟು ಆದರವಿದೆ. ನಮಗೆ ಈ ವಿಚಾರವಾಗಿ ಮಾತನಾಡಬೇಡಿ ಎಂದು ಹೇಳಿದರೇ? ಇಲ್ಲ. ನಾವು ಎಷ್ಟು ಬಾಯಿ ಬಡಿದುಕೊಂಡರೂ, ಲಬೋ, ಲಬೋ ಎಂದು ಹೇಳಿದರೂ ನಾವು ತೆಗೆದುಕೊಳ್ಳುವುದನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದರೆ ಹೇಳಲಿ. ನಾವು ಇಲ್ಲಿ ಅವರ ಪರವಾಗಿ ಹೇಳಬೇಕಾದ್ದನ್ನು ಸಂಪೂರ್ಣವಾಗಿ ಹಾಗೂ ಸುದೀರ್ಘವಾಗಿ ಹೇಳಿಯೇ ತೀರಬೇಕು. ಈ ಮನೂದೆಯ ಪ್ರಾಮುಖ್ಯತೆ ತಮಗೂ ಗೊತ್ತಿದೆ. ಅದರಲ್ಲಿಯೂ ಇಂತಹ ಪ್ರಾಮುಖವಾದ ವಿಷಯವನ್ನೊಳಗೊಂಡಂಥ ಈ ಮನೂದೆಯ ಮೇಲಿನ ಚರ್ಚೆಯನ್ನು ಪೊಟಕು ಮಾಡುವುದಕ್ಕೆ ದಯವಿಟ್ಟು ತಾವು ಹೋಗಬೇಡಿ. 7 ಘಂಟೆಗೆ ಖಂಡಿತವಾಗಿ ಆಗುವುದಿಲ್ಲ. ಅದರ ಮೇಲೆಯೂ ತಾವು ಇನ್ನೂ ಅವಕಾಶ ಕೊಡಬೇಕು. 7 ಘಂಟೆಗೆ ನೀವು ಗಿಲ್ಲೊಟಿನ್ ಮಾಡುತ್ತೇವೆಂದರೆ ಬಿಡುವುದಿಲ್ಲ. ಇನ್ನು 35 ನಿಮಿಷಗಳನ್ನು ನಾವು ಇಲ್ಲಿ ಏಕೆ ಕಳೆಯಬೇಕು, ನಾವು ಅದರ ಬಗ್ಗೆ ಪ್ರತಿಭಟನೆ ಮಾಡುವುದನ್ನು ಮಾಡಿಯೇ ಮಾಡುತ್ತೇವೆ.

Mr. SPEAKER.—I have made it abundantly clear that unless the House revises its decision I cannot do anything.

ಶ್ರೀ ಎಚ್. ಸಿದ್ದವೀರಪ್ಪ.—ನಾವು ಅವರನ್ನು ಕೇಳುವುದಿಲ್ಲ. ತಮ್ಮನ್ನು ಕೇಳುತ್ತೇವೆ. ಅವರಿಗೂ ನಮಗೂ ನೀವೇ ಅಧಾರ. ಮಂತ್ರಿಮಂಡಲದವರೇನೋ ಗಡ್ಡ ಒರಸಿಕೊಂಡು ನಮಗೆ ಬರುವುದು ಬಂತು ಎಂದು ಕೈಬೀಸಿಕೊಂಡು ಹೋಗೋಣವೆಂದು ಹೇಳುತ್ತಿದ್ದಾರೆ.

Mr. SPEAKER.—If members cannot understand, I cannot help it. The time allocation has been made by the Business Advisory Committee and on that the House has done what it could do and there the matter ends. I am going to apply guillotine at 7 o' Clock.

ಶ್ರೀ ಎಚ್. ಸಿದ್ದವೀರಪ್ಪ.—ಕಾಂಗ್ರೆಸ್ ಪಕ್ಷದವರ ತೀರ್ಮಾನವನ್ನು ತಾವು ದಯವಿಟ್ಟು ತೆಗೆದುಕೊಳ್ಳಬಾರದು. ಈ ವಿಷಯವನ್ನು ಈ ಸಭೆ ಪೂರ್ಣವಾಗಿ ವಿಚಾರ ಮಾಡಬೇಕು. ಇದು ಎಲ್ಲರಿಗೂ ಸಂಬಂಧಪಟ್ಟ ವಿಚಾರ.

ಅಧ್ಯಕ್ಷರು.—ನಾನು ಹೇಳುವುದನ್ನು ಹೇಳಿದ್ದೇನೆ.

ಶ್ರೀ ಎಚ್. ಸಿದ್ದವೀರಪ್ಪ.—ತಾವು ಪೂರ್ಣ ಚರ್ಚೆಗೆ ಅವಕಾಶ ಕೊಡುತ್ತೀರೆಂಬ ನಂಬಿಕೆ ನಮಗೆ ಇದೆ.

ಅಧ್ಯಕ್ಷರು.—ನಾನು 7 ಗಂಟೆಗೆ ಮುಕ್ತಾಯ ಮಾಡುತ್ತೇನೆಂದು ಖಂಡಿತವಾಗಿ ತಿಳಿಸಿದ್ದೇನೆ.

ಶ್ರೀ ಎಚ್. ಸಿದ್ದವೀರಪ್ಪ.—ನಾವು 7 ಗಂಟೆಗೆ ಇದನ್ನು ಮುಗಿಸುವುದಕ್ಕಾಗುವುದಿಲ್ಲವೆಂದು ಸ್ಪಷ್ಟೀಕರಿಸಿದ್ದೇವೆ. ನಮ್ಮ ಕಡೆ ಇನ್ನೂ ಮಾತನಾಡುವ ಸದಸ್ಯರುಗಳು ಬಹಳ ಮಂದಿ ಇದ್ದಾರೆ. We are making a final appeal to you. If you are going to give time for full discussion on this subject, then only we are prepared to participate in the discussion. 7 ಗಂಟೆಯೊಳಗೆ ನಮಗೆ ಇದು ಆಗಬೇಕು, ನಮಗೆ ಆದರ ಫಲ ದೊರಕಬೇಕು ಎಂಬುದಾಗಿ ಹೇಳಿದರೆ ಅದಕ್ಕೆ ನಾವು ಸಮ್ಮತಿ ಕೊಡುವುದಿಲ್ಲ ಮತ್ತು ಒಪ್ಪಿಗೆ ಕೊಡುವುದಿಲ್ಲ.

ಅಧ್ಯಕ್ಷರು.—ಸಮ್ಮತಿ ಕೊಡುವುದಿಲ್ಲವೆಂದು ಹೇಳಿದ್ದು ಆಯಿತು. ಈ ಮನೆಯವರು ಈ ಮೋಷನ್ನನ್ನು ಓಟಿಗೆ ಹಾಕಬೇಕು ಅಂದರೆ ಈ ಮಾನ್ಯ ಸಭೆಯ ಅಭಿಪ್ರಾಯದ ಪ್ರಕಾರ ಹಾಕುತ್ತೇನೆ. ಅದನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ ಎಂಬುದಾಗಿ ಈ ಮನೆಯವರು ಕೇಳಿದರೆ ಅದಕ್ಕೂ ಸಿದ್ಧನಿದ್ದೇನೆ. ನನ್ನ ಕರ್ತವ್ಯವನ್ನು ನಾನು ಮಾಡಿಯೇ ಮಾಡುತ್ತೇನೆ.

ಶ್ರೀ ಅಜೀಜ್ ಸೇಟ್.—ಸದಸ್ಯರುಗಳ ವೇತನಕ್ಕಾಗಿ ಅದಂಥ ಚರ್ಚೆ 9 ಗಂಟೆಗಳು ನಡೆದಿದೆ. ಅವರಿಗೆ ಮನೆ ಅಲೊಯನ್ಸ್ ಇಲ್ಲ, ಅವರಿಗೆ ಬೇರೆ ಪರ್ಸನಲ್ಸ್ ಸಿಬ್ಬಂದಿ ಸೌಕರ್ಯವಿಲ್ಲ, ಕಾರುಗಳಿಲ್ಲ. ಟಿ.ಎ. ಮತ್ತು ಡಿ. ಎ.ಗಳಿಲ್ಲ ಇಷ್ಟೆಲ್ಲಾ ಅವರಿಗೆ ಇಲ್ಲದಿದ್ದರೂ ಅದು ಸುಮಾರು 9 ಗಂಟೆಗಳು ಚರ್ಚೆಯಾಗಿದೆ. ಆದರೆ ಮಂತ್ರಿಗಳಿಗೆ ಆ ಸೌಕರ್ಯಗಳನ್ನೆಲ್ಲಾ ಕೊಟ್ಟಿರುವಾಗ ಅವರಿಗೆ 900 ರೂಪಾಯಿಗಳಿಂದ 1200 ರೂಪಾಯಿಗಳವರೆಗೆ ಸಂಬಳ ಏರಿಕೆಯಾಗುವಾಗ ಅವರ ಸಂಬಳದ ಬಗ್ಗೆ ತಂದಿರತಕ್ಕ ಮಸೂದೆಯ ಮೇಲೆ ಚರ್ಚೆ ಮಾಡುವುದಕ್ಕೆ ಕೇವಲ ಒಂದೂವರೆ ಗಂಟೆ ಸಾಕು ಎಂದು ಹೇಳಿದರೆ ಯಾವ ರೀತಿ ಸರಿಹೋಗುತ್ತದೆ? ಅದು ನ್ಯಾಯವೇ? ಇದು ಎರಡು ಬೆಕ್ಕುಗಳ ಮಧ್ಯೆ ಕೋತಿ ಮಜಾ ಮಾಡಿದಹಾಗೆ ಆಯಿತು.

ಶ್ರೀ ಪಿ. ವೆಂಕಟಗಿರಿಯಪ್ಪ.—ಈ ಸಭೆ ಇವತ್ತು 7 ಗಂಟೆಯೊಳಗೆ ಮುಗಿಯುತ್ತದೆ, ತಾವು ಬೇರೆಯವರಿಗೆ ಅಮೇಲೆ ಮಾತನಾಡಲು ಅವಕಾಶಕೊಡುವುದಿಲ್ಲವೆಂದು ಹೇಳುತ್ತಿದ್ದೀರಿ. ನಮಗೆ ಮಾತನಾಡಲು ಪೂರ್ತಿಯಾಗಿ ಅವಕಾಶವನ್ನು ಕೊಡದೇ ಇದ್ದರೆ, ನಾವೆಲ್ಲರೂ ವಾಕ್‌ಔಟ್‌ಮಾಡಿ ಹೋಗುತ್ತೇವೆ.

ಶ್ರೀ ಸಿ. ಎಂ. ಎನ್. ಶಾಸ್ತ್ರಿ.—ತಾವು ಹೇಳಿದ ರೀತಿಯಲ್ಲ ಈ ಸಭೆಯನ್ನು 7 ಗಂಟೆಯೊಳಗೆ ಮುಕ್ತಾಯಮಾಡುವುದಕ್ಕೆ ಸಾಧ್ಯವಿಲ್ಲ. ತಾವೇನೋ ಇವತ್ತು 7 ಗಂಟೆಯೊಳಗೆ ಮುಕ್ತಾಯ ಮಾಡುತ್ತೇನೆಂದು ಹೇಳುತ್ತಿದ್ದೀರಿ. ಕಾಲಾವಕಾಶವನ್ನು ಎಲ್ಲ ಸದಸ್ಯರಿಗೂ ಮಾತನಾಡಲು ಸಾಕಷ್ಟು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು.—ಪುನರಪಿ, ಪುನರಪಿ, ಎಲ್ಲರೂ ಎದ್ದು ಅದನ್ನೇ ಹೇಳುತ್ತಿದ್ದೀರಿ. ನನಗೆ ಅಧಿಕಾರವಿದ್ದಷ್ಟು ರೂಲ್ಸ್ ಪ್ರಕಾರ ಹೇಳಿದ್ದೇನೆ.

ಶ್ರೀ ಅಜೀಜ್‌ಸೇಟ್.—ತಾವು ಏನೋ ಮಾರ್ಷರ್ ಇದ್ದಾರೆಂದು ಈ ರೀತಿ ಹೇಳಬಹುದು. ಅವರು ಎಲ್ಲರಿಗೋಸ್ಕರ ಇದ್ದಾರೆ. ನಮ್ಮೆಲ್ಲರನ್ನೂ ಎತ್ತಿ ಬಿಸಾಡಿ ಎಂದು ಹೇಳುತ್ತೀರೇನೊ, ನಾವೇ ಬೇಕಾದರೆ ಒಬ್ಬೊಬ್ಬರು ಹೊರಟುಹೋಗುತ್ತೇವೆ.

6-30 P.M.

**Sri H. SIDDAVEERAPPA.**—Otherwise, we see no reason why we should make you get tired and why we should allow these things to go on endlessly and purposelessly. My submission is if the members of the so-called Treasury Benches can be persuaded to extend the time and allow a full discussion on this, we will take it; otherwise we feel that it serves no purpose. Let them say their final say. If they still say that they are in a majority, they can have it passed today, their party is the supreme and we belong to a different party, it is a different matter.

**Mr. SPEAKER.**—I will put it to the vote of the House. I am not concerned with any party.

**Sri S. SIVAPPA.**—We would like to know whether our friends sitting on the other side understand us or not? ಸ್ವಾಮಿ, ನಾನು ಇಷ್ಟು ಹೇಳುತ್ತೇನೆ. ಈ ವಿಧೇಯಕದ ವಿಷಯದಲ್ಲಿ ಪೂರ್ಣವಾಗಿ ಚರ್ಚೆ ಮಾಡುವುದಕ್ಕೆ ನಮಗೆ ಅವಕಾಶವನ್ನು ಕೊಡಬೇಕು. ಈ ಚರ್ಚೆಯಲ್ಲಿ ಎಲ್ಲರೂ ಭಾಗವಹಿಸಬೇಕು. ಟ್ರೆಜರಿಬೆಂಚಿನಲ್ಲಿರುವವರು ಎಲ್ಲರೂ ನುಮ್ಮನೆ ಮೂಸರಂತೆ ಕುಳಿತುಕೊಂಡಿದ್ದಾರೆ. ಈಗ ನಾವು ಏನುಮಾಡಬೇಕೆಂಬುದು ನಮಗೆ ಗೊತ್ತಾಗುವುದಿಲ್ಲ.

**ಶ್ರೀ ಎಚ್. ಸಿದ್ದವೀರಪ್ಪ.**—ಶ್ರೀಮಾನ್ ಸಿದ್ದಯ್ಯ ಕಾಶೀಮಠ ಅವರು ಯಾವಕಾರಣದಿಂದ ಮಂತ್ರಿಗಳಿಗೆ ಸಂಬಳವನ್ನು ಹಾಸ್ಯಮಾಡಬೇಕೆಂಬುದನ್ನು ಹೇಳಲಿಲ್ಲ. ಮಂತ್ರಿಗಳಿಗೆ ಸಂಬಳವನ್ನು ಹಾಸ್ಯಮಾಡಬೇಕೆಂದು ಯಾರಿಂದ ವರ್ತಮಾನ ಬಂತು ಎಂಬುದು ನಮಗೆ ಗೊತ್ತಾಗಲಿಲ್ಲ. ಮಂತ್ರಿಗಳು ಬೇಕಾದರೆ ನಮಗೆ ಕಪ್ಪ ಇದೆ, ನಮಗೆ 1,200 ರೂಪಾಯಿ ಸಂಬಳಬೇಕು ಎಂದು ಈ ಸಭೆಯು ಮುಂದೆ ಹೇಳಲಿ. ಏನೋ ಕಾರಣದಿಂದ ಅವರು ಈ ಬಿಲ್ಲನ್ನು ಈ ಸಭೆಯ ಮುಂದೆ ಮೂವ್ ಮಾಡದೇ ಇರಬಹುದು. ಆದರೆ ನಾಳೆ ಈ ಬಿಲ್ಲು ಪಾಸಾದಮೇಲೆ, ನಮಗೇನೂ ಹೆಚ್ಚಿನ ಸಂಬಳ ಬೇಡವಾಗಿತ್ತು, ಈ ಸಭೆಯವರೇ ನಮಗೆ ಹೆಚ್ಚಿನ ಸಂಬಳವನ್ನು ಕೊಟ್ಟಿದ್ದಾರೆ ಎಂದು ಮಂತ್ರಿಗಳು ಹೇಳಬಹುದು. ಆದ್ದರಿಂದ ಈ ಮನೂದೆಯನ್ನು ಕಣ್ಣುಮುಚ್ಚಿಕೊಂಡು ಈ ಸಭೆಯಲ್ಲಿ ಪಾಸು ಮಾಡುವುದು ಬೇಡಿ. ಇದು ಈ ಸಭೆಯಲ್ಲಿ ಪೂರ್ಣವಾಗಿ ಚರ್ಚೆಯಾಗುವುದಕ್ಕೆ ಅವಕಾಶವನ್ನು ಕೊಡಬೇಕು. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಅಭಿಪ್ರಾಯ ಈ ಬಗ್ಗೆ ಯಾವರೀತಿ ಇದೆಯೆಂಬುದನ್ನೂ ಸಹ ತಿಳಿದುಕೊಳ್ಳಬೇಕು. ಶ್ರೀಮಾನ್ ಸಿದ್ದವನಹಳ್ಳಿ ಕೃಷ್ಣ ಶರ್ಮರು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಜಾಭಿಪ್ರಾಯವೇನಿದೆ ಎನ್ನುವ ಬಗ್ಗೆ ಒಂದು ಆರ್ಟಿಕಲ್ ಕೊಟ್ಟಿದ್ದಾರೆ. ಈ ದೃಷ್ಟಿಯಿಂದ ಪ್ರಜೆಗಳ ಪ್ರತಿನಿಧಿಗಳಾಗಿರತಕ್ಕ ಬಂದಿರತಕ್ಕ ನಾವು ನೀವು ಹೇಳಿದ್ದಕ್ಕೆಲ್ಲಾ ನುಮ್ಮನೆ ಕೈಎತ್ತುವುದಕ್ಕೆ ನಾವು ತಯಾರಿಲ್ಲ. ಈ ವಿಧೇಯಕದ ಮೇಲೆ ಫುಲ್ ಡಿಸ್‌ಕಷನ್ ಆಗಬೇಕು. ಇವೊತ್ತು 7 ಗಂಟೆಗೇ ಈ ಚರ್ಚೆಯನ್ನು ಮುಗಿಸುತ್ತೇವೆಂದು ತಾವು ಹೇಳುವುದಾದರೆ ಇದಕ್ಕೆ ನಮಗೆ ಒಪ್ಪಿಗೆ ಇಲ್ಲ. ಆದ್ದರಿಂದ ಈ ಬಗ್ಗೆ ಈಗಲೇ ತೀರ್ಮಾನಮಾಡಬೇಕು. ಇವೊತ್ತು 7 ಗಂಟೆಗೇ ಇದು ಆಗಿಯೇ ತೀರಬೇಕು ಎಂದರೆ ನಮ್ಮ ಮುಂದಿನ ಕ್ರಮ ಏನು ಎಂಬುದನ್ನು ನಾವು ಹೇಳಬೇಕಾಗುತ್ತದೆ

**ಶ್ರೀ ಎಸ್. ಶಿವಪ್ಪ.**—ಅವಿಶ್ವಾಸ ನಿರ್ಣಯವನ್ನು ಮಂಡಿಸುವುದಕ್ಕೆ ನಮಗೆ ಅವಕಾಶವನು ಕೊಡಿ ಅವರು ಬಾಯಿಬಡುವ ಹಾಗೆ ಮಾಡುತ್ತೇವೆ ಎಂದರೆ ಅದಕ್ಕೆ ತಾವು ಅವಕಾಶವನ್ನು ಕೊಡುವುದಿಲ್ಲ.

**Mr. SPEAKER.**—What is the sense of the House? Should we sit beyond seven?

**Sri D. M. SIDDAIAH.**—Sir, we may close this by seven.

**ಶ್ರೀ ಎಸ್. ಚನ್ನಯ್ಯ.**—ಮಧ್ಯಾಹ್ನ ಸೇರಬೇಕೆಂದು ಬೆಳಿಗ್ಗೆ ನಮಗೆ ಯಾರೂ ಹೇಳಲಿಲ್ಲ. ಅದು 12½ ಗಂಟೆ ಆದಹೊಲೆ ತಾವೇ ಮತ್ತೆ ಮಧ್ಯಾಹ್ನ ಸೇರಬೇಕೆಂದು ಹೇಳಿದಿರಿ.

Sri L. SRIKANTAIAH.—Sir, I rise to a Point of Order. May I know under what provision of law the time limit to be put is to be dictated by the Whip of the Congress Party ? Was the House consulted at any time ? At every stage the rules are being followed for our own ends. We feel sorry for it. Such things are not setting examples to youngsters like us. What is it that they are expected in a democracy to learn ? It is hypocracy and nothing else.

Mr. SPEAKER.—A Point of Order has been raised and hypocracy and democracy has been brought in.

Sri L. SRIKANTAIAH.—Hypocracy, hypocracy, hypocracy.

Mr. SPEAKER.—The Hon'ble Member gets up and repeats, hypocracy, hypocracy, hypocracy. The only point of order raised is that the suggestion made by the Whip of the Congress Party that the debate should be over at 7 P.M., is a dictation to the Speaker. Absolutely not. This is the decision of the House and I have said at least half a dozen times.

ಶ್ರೀ ಅಜೀಜ್ ಸೇಟ್.—ಈ ಬಿಲ್ಲಿನ ಮೇಲೆ ಮಾತನಾಡುವುದಕ್ಕೆ ನಮಗೆ ಕಾಲಾವಕಾಶವನ್ನು ಕೊಡದಿದ್ದರೆ, ಈ ಚರ್ಚೆಯಲ್ಲಿ ನಾವು ಯಾವರೀತಿ ಭಾಗವಹಿಸಬೇಕು ?

Mr. SPEAKER.—Now, it has been put to the House. After the members went out and came, I again said Seven. It was again put to vote and I asked whether Sri Siddaveerappa's motion or suggestion should be put to vote. Then also, the sense of the House was at Seven O'Clock. I do not understand members saying that the House has not said like that. If you want, I will again put it to the vote of the House.

Sri K. H. PATIL.—It was not put to vote regarding the timings. I am recalling this to your kind memory ; please look into the proceedings. I am only correcting you in this behalf.

ಶ್ರೀ ಎಸ್. ಗೋಪಾಲಗೌಡ.—ಈಗ ತಾವು ಒಂದು ಪ್ರಶ್ನೆಯನ್ನು ಯೋಚನೆ ಮಾಡಬೇಕು. ಈಗ ಇದನ್ನು ಜನಾಭಿಪ್ರಾಯಕ್ಕೆ ಹಾಕೋಣ ಎನ್ನುವ ಒಂದು ಸೂಚನೆ ಬಂತು. ಅದರಂತೆ ಜನಾಭಿಪ್ರಾಯವನ್ನು ತೆಗೆದುಕೊಳ್ಳುವುದಕ್ಕೆ ತಾವು ತಯಾರು ಇಲ್ಲ. ಅಥವಾ ಇದನ್ನು ಈ ಸಭೆಯಲ್ಲಿ ಪೂರ್ಣವಾಗಿ ಚರ್ಚೆ ಮಾಡುವುದಕ್ಕೆ ತಯಾರಿಲ್ಲ. ಸರ್ಕಾರದ ಪರವಿುಂದ ಮುಂತ್ರಿಮಂಡಲದವರು ಇದಕ್ಕೆ ಉತ್ತರವನ್ನು ಕೊಡುವುದಕ್ಕೆ ತಯಾರಿಲ್ಲ. ಈ ಸಭಾನಾಯಕರೂ ಕೂಡ ಇದರ ಬಗ್ಗೆ ಔದಾರ್ಯದಿಂದ ಒಂದು ಸೂಚನೆಯನ್ನು ಕೊಡಲಿಲ್ಲ. ಈಗ ತಾವು ಹೇಳುತ್ತೀರಿ ಇಪ್ಪೊತ್ತೇ ಈ ಮಸೂದೆಯನ್ನು ಪಾಸು ಮಾಡಬೇಕೆಂದು. ಆದ್ದರಿಂದ ಮುಖ್ಯವಾಗಿ ಇದರ ಬಗ್ಗೆ ಜನಾಭಿಪ್ರಾಯ ಹೇಗಿದೆ ಎನ್ನುವುದನ್ನು ಒಂದು ಪತ್ರಿಕೆಯಲ್ಲಿ ಹೇಳಿದೆ ಅದನ್ನು ನಾನು ಈಗ ತಮ್ಮ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು.—ಈಗ ಅದನ್ನು ಓದುವುದಕ್ಕಾಗುವುದಿಲ್ಲ. ಬೇಕಾದರೆ ಬರೆದುಕೊಡಿ. ಜನಾಭಿಪ್ರಾಯ ಎಂದು ಹೇಳಿ ಈಗ ಅದನ್ನು ಓದಿದರೆ ಸಾಧ್ಯವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಈ ಸಭೆಯಲ್ಲಿ ತಮ್ಮನ್ನು ಸ್ಪೀಕರಾಗಿ ಚುನಾಯಿಸಿದಾಗ ನಾವು ಸಂತೋಷದಿಂದ ಈ ಸಭೆಯಲ್ಲಿ ಪ್ರಜಾಪ್ರಭುತ್ವ ರೀತಿಯಲ್ಲಿ ಯಾರಿಗೂ ಭೇದಭಾವನೆಯಿಲ್ಲದ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಾರೆ ಎಂದು ನಾವು ತಿಳಿದುಕೊಂಡಿದ್ದೆವು. ಆದರೆ

ಇವೊತ್ತಿನ ಪರಿಸ್ಥಿತಿಯನ್ನು ನೋಡಿದರೆ ಅದು ಏಕೋ ಬದರಾವಣೆಯಾದ ಹಾಗೆ ಕಾಣುತ್ತದೆ. ಮಂತ್ರಿಗಳಿಗೆ ಸಂಬಳವನ್ನು ಜಾಸ್ತಿ ಕೊಡಬೇಕೆಂದು ಹೇಳುವ ಪಕ್ಷದಲ್ಲಿ ಅವರು ಬೇಕಾದರೆ ನಮಗೆ ಗತಿಯಿಲ್ಲ, ಜಾಸ್ತಿ ಸಂಬಳ ಕೊಡಿ ಎಂದು ಕೇಳಲಿ.

* * * *

ಈಗ ನಾವು ತಮ್ಮ ಮಾತಿಗೆ ಗೌರವ ಕೊಡಬೇಕು, ಅದರಂತೆ ನಾವು ನಡೆದುಕೊಳ್ಳುತ್ತಿದ್ದೇವೆ. ಆದರೆ ಈ ಸಭೆಯ ನಡವಳಿಕೆಯು ವಿಷಯದಲ್ಲಿ ಯಾವ ವಿಧವಾದ ಭೇದಭಾವವು ಇರಬಾರದು ಎಂದು ನಾವು ಅನೇಕಸಾರಿ ತಮಗೆ ಹೇಳಿದ್ದೇವೆ. ಇವೊತ್ತು ಇಡೀ ದೇಶವೇ ಒಂದು ಗಂಡಾಂತರ ಪರಿಸ್ಥಿತಿಯಲ್ಲದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಇಂಥಾ ಸಂದರ್ಭದಲ್ಲಿ ಮಿತ್ರಿಗಳಿಗೆ ಸಂಬಳವನ್ನು ಜಾಸ್ತಿ ಮಾಡತಕ್ಕಂಥ ಒಂದು ಮಸೂದೆ ಈಗ ಈ ಸಭೆಯ ಮುಂದೆ ಬಂದಿದೆ. ಇದರ ಬಗ್ಗೆ ಸಂಪೂರ್ಣವಾಗಿ ಒಂದು ದಿವಸ ಚರ್ಚೆಯಾಗಬೇಕು ಎಂದು ನಾವು ಹೇಳಿದರೆ, ಆಗುವುದಿಲ್ಲ ಇನ್ನು ಒಂದು ಗಂಟೆಯೆಲ್ಲೇ ಈ ಚರ್ಚೆಯನ್ನು ಮುಗಿಸಬೇಕೆಂದು ತಾವು ನಮಗೆ ಆರ್ಡರ್ ಮಾಡಿದಿರಿ. ಆದ್ದರಿಂದ ಈಗ ನಾವು ಅದಕ್ಕೆ ತಯಾರು ಇಲ್ಲ ಎಂದು ನಾವು ತಮಗೆ ಆರ್ಡರ್ ಮಾಡಬೇಕಾಗುತ್ತದೆ.

ಅಧ್ಯಕ್ಷರು.—ಈ ಮೆಂಬರ್ ನನಗೆ ಆರ್ಡರ್ ಮಾಡುತ್ತಾರೆ. ಡೆಮೋಕ್ರಸಿ ಮಾತಾಡುತ್ತಾರೆ, ಹಿಪಾಕ್ರಸಿ ಮಾತಾಡುತ್ತಾರೆ. I want to know the sense of the House whether we should sit till 7 P.M. and not thereafter.

(*The House agreed to sit till 7 p.m. only*)

ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ತಾವು ಈ ಸಭೆಯಲ್ಲಿ ಈ ವಿಚಾರವಾಗಿ ಚರ್ಚೆಗೆ ಪೂರ್ಣವಾದ ಅವಕಾಶ ಕೊಡಬೇಕೆಂದು ನಾನೂ ಹಾಗೂ ನನ್ನ ಮಿತ್ರರನೇಕರು ಅನೇಕ ಸಾರಿ ಈ ಸಭೆಯಲ್ಲಿ ಹೇಳಿ ವಿನಂತಿ ಮಾಡಿಕೊಂಡರೂ, ಅದು ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಆಯಿತು. ನಮ್ಮ ಪ್ರಾರ್ಥನೆಯು ಏನೂ ಪ್ರಯೋಜನಕ್ಕೆ ಬರಲಿಲ್ಲ. ಇದು ಬಹಳ ಖಂಡನೀಯ ಮತ್ತು ವಿಷಾದನೀಯ ಇವತ್ತು ನೀವು ಸರ್ಕಾರಕ್ಕೆ ಮಣಿದು ಅದನ್ನೇ ಸ್ವಾಗತಿಸುತ್ತಾ, ಪ್ರಜಾ ಪ್ರಭುತ್ವದಲ್ಲಿ ಮಂತ್ರಿಮಂಡಲಕ್ಕೆ ಸಂಬಂಧಪಟ್ಟ ವಿಚಾರ ಏನು ಹೇಳಿದರೂ ಅದನ್ನು ದೀರ್ಘಕಾಲವಾಗಿ ಕೇಳತಕ್ಕ ಮನೋಭಾವ ತಮ್ಮಲ್ಲಿ ಇಲ್ಲ; ಮತ್ತು ತಾವು ನಮಗೆ ಸಾಕಷ್ಟು ಅವಕಾಶ ಮಾಡಿಕೊಡಲಿಲ್ಲ. ಇದರಿಂದ ಜನತೆಗೆ ಮಹಾ ಅಪಕಾರವನ್ನೇ ಮಾಡಿದ ಹಾಗೆ ಆಗಿದೆ. ನವ್ಮ ಸರ್ಕಾರದವರ ಮನೋಭಾವವು ಸರ್ವಾಧಿಕಾರ ಮನೋವೃತ್ತಿಯಾಗಿದೆ. ಅದನ್ನು ತುಚ್ಛೀಕರಿಸಿ, ನಾವು ಎಷ್ಟು ಕೇಳಿದ್ದಾಗ್ಯೂ ಸಹ ತಾವು ಸರ್ಕಾರಕ್ಕೆ ಒಲಿದು ನಮಗೆ ಚರ್ಚೆಗೆ ಅವಕಾಶ ಮಾಡಿ ಕೊಡಲಿಲ್ಲವಾದ್ದರಿಂದ, ನಾವು ವಿರೋಧ ಪಕ್ಷದವರೆಲ್ಲರೂ ಸಭಾತ್ಯಾಗವನ್ನು ಮಾಡುತ್ತೇವೆ.

(*The members of the Opposition staged a walk out except Sri Siddiah Kashimath shouting 'shame shame, shame'.....*

Mr. SPEAKER.—The question is :

"That the Mysore Ministers Salaries and Allowances (Amendment) Bill, 1967, be taken into consideration."

*The Motion was adopted.*

CLAUSES

Mr. SPEAKER.—The question is :

"That Clauses 2 to 10, both inclusive stand part of the Bill."

*The motion was adopted.*

Clauses 2 to 10, both inclusive, were added to the Bill.

**** Matter expunged as ordered by the Chair.